
# ಜಾಂಬವತಿ ಕಲ್ಯಾಣ

(ಯಕ್ಷಗಾನ ಪ್ರಸಂಗ)



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - 560 002

# ಜಾಂಬವತಿ ಕಲ್ಯಾಣ

## (ಯಕ್ಷಗಾನ ಪ್ರಸಂಗ)

ಸಂಪಾದಕ

ಬಿದರಹಳ್ಳಿ ನರಸಿಂಹಮೂರ್ತಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

ಜಾಂಬವತಿ ಕಲ್ಯಾಣ—ಯಕ್ಷಗಾನ ಪ್ರಸಂಗ : ಸಂ. ಬಿದರಹಳ್ಳಿ ನರಸಿಂಹಮೂರ್ತಿ
ಪ್ರಕಾಶಕರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ವರ್ಷ : ನವೆಂಬರ್ '೯೭

ಪುಟ ೧೬ + ೩೮

ಹಾಡಿದವರು : ಫಲ್ಗುಬಾಯಿ, ಕಮಲಾಬಾಯಿ, ಕಲ್ಲಾಪುರದ ರಾಘವೇಂದ್ರಾಚಾರ್

ಹಕ್ಕು : ಧಾರಿಣಿಮೂರ್ತಿ

ಮುಖಚಿತ್ರ :

ಬೆಲೆ : ರೂ. 15/-

ಮುದ್ರಣ
ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು-೨೭

# ಅರ್ಪಣೆ

ಕಾಡಿನ ದೊಡ್ಡಮ್ಮ

ಕಮಲಾಬಾಯಿಗೆ

# ಅಧ್ಯಕ್ಷರ ಮಾತು

ಕರ್ನಾಟಕ ಜನಪದ ಕಲೆಗಳಲ್ಲಿ ಯಕ್ಷಗಾನವು ಸುಧೀರ್ಘ ಮತ್ತು ಸಮೃದ್ಧ ಇತಿಹಾಸವನ್ನುಳ್ಳ ಹಾಗೂ ಪಂಡಿತ ಪಾಮರರಿಬ್ಬರನ್ನು ರಂಜಿಸುವ ವೈಶಿಷ್ಟ್ಯ ಪೂರ್ಣವಾದ ಸತ್ವಶಾಲೀ ಕಲೆ. ಈ ಕಲೆ ತನ್ನ ಸಾಹಿತ್ಯ, ಸಂಗೀತ, ಅಭಿನಯ ಮತ್ತು ವೇಷಭೂಷಣಗಳಿಂದ ಪ್ರೇಕ್ಷಕರೆದುರು ಹೊಸದೊಂದು ಲೋಕವನ್ನೇ ಸೃಷ್ಟಿಸಿ ಬಿಡುವ ಚಾಯುಮಾನವುಳ್ಳದ್ದು. ಮೂಲತಃ ಜನಪದದಿಂದಲೇ ಸೃಷ್ಟಿಗೊಂಡು ಹೊಸ ಹೊಸ ಆಯಾಮಗಳನ್ನು ಪಡೆದು ವಿಕಾಸಗೊಂಡ ಈ ಕಲೆ ಕಾಲಕ್ರಮೇಣ ಶಿಷ್ಟಪದೀಯ ಅಂಶಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು ಮತ್ತಷ್ಟು ಪರಿಣಾಮಕಾರಿಯಾಗಿ ಬೆಳೆದಿದೆ ಮತ್ತು ಬೆಳೆಯುತ್ತಿದೆ. ಕರ್ನಾಟಕದ ಯಕ್ಷಗಾನದಲ್ಲಿ ಐದು ಪ್ರಕಾರಗಳಿವೆ:

೧) ಕರಾವಳಿಯ ಯಕ್ಷಗಾನ: ಇದರಲ್ಲಿ ತೆಂಕತಿಟ್ಟು ಮತ್ತು ಬಡಗುತಿಟ್ಟು ಎಂಬ ಉಪಪ್ರಮೇಯವಿದೆ. ಇವು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರಚಲಿತವಾಗಿವೆ.

೨) ಮೂಡಲಪಾಯ: ಹಾಸನ, ಮಂಡ್ಯ, ತುಮಕೂರು, ಚಿತ್ರದುರ್ಗ, ಮೈಸೂರು.

೩) ದೊಡ್ಡಾಟ: ಧಾರವಾಡ, ಬೆಳಗಾಂ, ಬಿಜಾಪುರ, ರಾಯಚೂರು, ಬಳ್ಳಾರಿ, ಬೀದರ್, ಗುಲ್ಬರ್ಗ.

೪) ಘಟ್ಟದಕೋರೆ: ಮೈಸೂರು ಜಿಲ್ಲೆಯ ಕೆಲವು ಭಾಗ.

೫) ಕೇಳಿಕೆ: ಕೋಲಾರ ಜಿಲ್ಲೆಯೇ ಇದರಕೇಂದ್ರಸ್ಥಾನ.

ಈ ಪ್ರಬೇಧಗಳಲ್ಲಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಚಲಿತವಾಗಿ ಉಜ್ವಲ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ತೆಂಕತಿಟ್ಟು ಮತ್ತು ಬಡಗುತಿಟ್ಟುಗಳು ರಾಷ್ಟ್ರಾದ್ಯಂತ ಮತ್ತು ರಾಷ್ಟ್ರದ ಎಲ್ಲೆಯನ್ನು ಮೀರಿ ಪ್ರಖ್ಯಾತವಾಗಿ ಕನ್ನಡ ಕೀರ್ತಿಯನ್ನು ಮೆರೆಸಿದೆ. ಅಷ್ಟೇ ಅಲ್ಲ ಯಕ್ಷಗಾನವೆಂದರೆ ಕರಾವಳಿ ಯಕ್ಷಗಾನ ಮಾತ್ರವೇ ಎಂಬ ಅಭಿಪ್ರಾಯ ಜನಜನಿತವಾಗುವಷ್ಟರ ಮಟ್ಟಿಗೆ ಇದು ಪರಿಣಾಮಕಾರಿಯಾಗಿದೆ. ಆದರೆ ಯಕ್ಷಗಾನ ಕೇವಲ ಕರಾವಳಿಗೆ ಮಾತ್ರ ಮೀಸಲಾಗಿ

ದ್ದಲ್ಲಿ ಅದು ಕೇರಳ, ಆಂಧ್ರ ಮತ್ತು ತಮಿಳುನಾಡಿನಲ್ಲಿಯೂ ಕಾಣಬರುತ್ತದೆ. ಹಾಗೆಯೇ ಕರ್ನಾಟಕದ ಉಳಿದ ಭಾಗದ ಯಕ್ಷಗಾನ ಪ್ರಭೇದಗಳು ಸಹ ಹತ್ತು ಹಲವು ವೈಶಿಷ್ಟ್ಯಗಳನ್ನು ಬೆಳೆಸಿಕೊಂಡು ಬಂದಿವೆ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಿದ್ಯಾವಂತರು ಮತ್ತು ಸಮಾಜದ ಪ್ರತಿಷ್ಠಿತರು ಹಾಗೂ ಮಠ, ದೇವಾಲಯ ಮುಂತಾದ ಸಂಸ್ಥೆಗಳು ಈ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿ, ಹಲವಾರು ಪ್ರಯೋಗಗಳನ್ನು ಮಾಡಿ, ಸಂಸ್ಕರಿಸಿ ಅದಕ್ಕೊಂದು ನಿತ್ಯನೂತನತೆಯನ್ನು ಮತ್ತು ಪರಿಣಾಮಕಾರಿ ಆಕರ್ಷಣೆಯನ್ನು ಹಾಗೂ ಜನಪ್ರಿಯತೆ ಮತ್ತು ಪ್ರತಿಷ್ಠೆಗಳನ್ನು ತಂದುಕೊಟ್ಟಿದ್ದಾರೆ. ಹೀಗಾಗಿ ಕರಾವಳಿ ಯಕ್ಷಗಾನದ ಸಾಹಿತ್ಯ, ಸಂಗೀತ ಅಭಿನಯ ಹಾಗೂ ವೇಷಭೂಷಣಗಳು ಅತ್ಯಂತ ಕಲಾತ್ಮಕವಾಗಿ ರೂಪುಗೊಂಡಿವೆ. ಆದರೆ ಕರ್ನಾಟಕದ ಉಳಿದ ಭಾಗದಲ್ಲಿ ಶಿಕ್ಷಣ ದಟ್ಟವಾಗಿ ಹಬ್ಬದಿರುವುದರಿಂದ ಮತ್ತು ಶಿಕ್ಷಣ ಪಡೆದವರೂ ಸಹ ಈ ಕಲೆಯನ್ನು ಅವಗಣಿಸಿರುವುದರಿಂದ ಇದಕ್ಕೆ ಹೆಚ್ಚಿನ ಪ್ರಚಾರ, ಪರಿಷ್ಕರಣ ಮತ್ತು ಪ್ರತಿಷ್ಠೆಗಳು ಲಭ್ಯವಾಗಿಲ್ಲ. ಈ ಭಾಗದ ಯಕ್ಷಗಾನ ಪ್ರಭೇದಗಳನ್ನು ಉಳಿಸಲು ಬೆಳೆಸಲು ಒಂದು ದೊಡ್ಡ ಸೃಜನಶೀಲ ಆಂದೋಲನವೇ ನಡೆಯಬೇಕಾಗಿದೆ.

ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನಕ್ಕೆ ಸಂಬಂಧಿಸಿದ ಸಾಹಿತ್ಯ ಕೂಡ ಶೋಧಿತವಾಗುತ್ತಿದೆ, ರಚಿತವಾಗುತ್ತಿದೆ ಮತ್ತು ಪ್ರಕಟಗೊಳ್ಳುತ್ತಿದೆ. ಪುರಾಣ ಮಹಾಕಾವ್ಯ ಮುಂತಾದವುಗಳನ್ನು ಆಧರಿಸಿದ ಸಾಹಿತ್ಯ ಮಾತ್ರವಲ್ಲದೇ ಸಮಕಾಲೀನ ವಸ್ತು ಸಂಗತಿಗಳನ್ನು ಆಧರಿಸಿದ ಯಕ್ಷಗಾನ ಪ್ರಸಂಗಗಳು ಸಹ ಗಣನೀಯ ಪ್ರಮಾಣದಲ್ಲಿ ರಚಿತವಾಗುತ್ತಿದ್ದು ಯಕ್ಷಗಾನ ಕಲೆ ಆಧುನಿಕ ಜೀವನಕ್ಕೆ ಹತ್ತಿರವಾಗಲು ಪ್ರಯತ್ನಿಸುತ್ತಿದೆ. ಆದರೆ ಇದೇ ಮಾತನ್ನು ಕರ್ನಾಟಕದ ಉಳಿದ ಭಾಗದ ಯಕ್ಷಗಾನ ಸಾಹಿತ್ಯಕ್ಕೆ ಅನ್ವಯಿಸುವಂತಿಲ್ಲ. ಮೂಡಲಪಾಯದಲ್ಲಿ ನೂರಾರು ಕಾಗದದ ಮೇಲೆ ಹಾಗೂ ಓಲೆಗರಿಯಲ್ಲಿ ಬರೆದ ಯಕ್ಷಗಾನ ಸಾಹಿತ್ಯ ಕೃತಿಗಳು ಲಭ್ಯವಿದೆಯಾದರೂ ಪ್ರಮಾಣ ಹೇಳಿಕೊಳ್ಳುವಷ್ಟಿಲ್ಲ. ಹಿಂದೆ ಪ್ರತಿ ಹಳ್ಳಿಯಲ್ಲಿಯೂ ಯಕ್ಷಗಾನಗಳನ್ನು ಕಲಿತು ಪ್ರದರ್ಶನ ಮಾಡಲಾಗುತ್ತಿತ್ತು. ಹಳ್ಳಿಯ ಜನ ಈ ಸಾಮೂಹಿಕ ಮನರಂಜನೆಯ ಹಾಗೂ ಮನೋವಿಕಾಸದ ಕಲೆಯಲ್ಲಿ ಭಾಗಿಗಳಾಗುತ್ತಿದ್ದರು. ಆದ್ದರಿಂದ ಈ ಪ್ರಭೇದದ ಸಾಹಿತ್ಯ ಕೂಡ ಗಮನಾರ್ಹ ಪ್ರಮಾಣದಲ್ಲಿ ಇದ್ದಿರಲೇಬೇಕು. ಹಳ್ಳಿಹಳ್ಳಿಗಳಲ್ಲಿ ಇಂತಹ ಸಾಹಿತ್ಯವನ್ನು ಶೋಧಿಸುವ, ಸಂಪಾದಿಸುವ, ಪ್ರಕಟಿಸುವ ಮತ್ತು ಪ್ರದರ್ಶಿಸುವ ಶ್ರದ್ಧಾವಂತ ಪ್ರಯತ್ನಗಳು ನಡೆಯಬೇಕಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ನಿಟ್ಟಿನಲ್ಲಿ ತನ್ನ ಅಳಿಲು ಸೇವೆಯನ್ನು ಮಾಡುತ್ತಿದೆ.

ಕನ್ನಡದ ಕವಿಗಳೂ, ಬರಹಗಾರರೂ ಮತ್ತು ಪ್ರಗತಿಪರ ಚಿಂತಕರೂ ಆದಂತಹ ಮಿತ್ರರಾದ ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ ಅವರ ಪ್ರಸ್ತುತ ಕೃತಿ 'ಜಾಂಬವತಿ ಕಲ್ಯಾಣ'ವನ್ನು ಸಂಪಾದಿಸಿಕೊಟ್ಟಿದ್ದಾರೆ. ಕೇವಲ ಬಾಯ್ದೆರಿಯಾಗಿ ಇದ್ದು, ಇದೂವರೆಗೆ ಲಿಖಿತರೂಪವನ್ನು ತಾಳದಿದ್ದ ಈ ಕೃತಿಯನ್ನು ತಮ್ಮ ತಾಯಿಯವರಿಂದ ಹೇಳಿಸಿಕೊಂಡು, ಮೂಲಕ ಭಾಷೆ, ಧನಿ, ಧಾಟಿಗಳು ಆರದ ಹಾಗೆ ಮತ್ತು ಹಿಂದೆ ಪ್ರದರ್ಶಿತಗೊಳ್ಳುತ್ತಿದ್ದ ಈ ಯಕ್ಷಗಾನ ಪ್ರಸಂಗದ ಮೂಲಕ ವಾತಾವರಣ ಮತ್ತು ಸೊಗಡು ಮಾಸದ ಹಾಗೆ ತುಂಬ ಪರಿಶ್ರಮದಿಂದ ಸಂಗ್ರಹಿಸಿದ್ದಾರೆ. ಅವರ ಸಂಗ್ರಹ ಜಾಣ್ಮೆ ಮತ್ತು ಮೂಲನಿಷ್ಠೆ ಈ ಕೃತಿಯ ಪುಟಪುಟಗಳಲ್ಲಿ ಸುವ್ಯಕ್ತವಾಗಿದೆ. ಇಲ್ಲಿಯ ಹಾಡುಗಳು ಸಾಂಪ್ರದಾಯಿಕವಾದ ಆದರೂ ವೈವಿಧ್ಯಮಯವಾದ ಛಂದಸ್ಸುಗಳಲ್ಲಿ ರಚಿತವಾಗಿವೆ. ಜಂಪೆ ತಾಳ, ದ್ವಿಪದಿ, ತ್ರಿಪುಟ ತಾಳ, ಏಕತಾಳ, ಆದಿತಾಳ, ಅಷ್ಟತಾಳ ಮುಂತಾದ ತಾಳಗಳ ಲಯದಲ್ಲಿ ನಾಟಿರಾಗ, ಸೌರಾಷ್ಟ್ರರಾಗ, ಕಾಂಬೋಡಿರಾಗ, ಭೈರವಿರಾಗ, ಕಾಪಿರಾಗ, ಕಲ್ಯಾಣರಾಗ, ಕೇದಾಳಗೌಳ ರಾಗ, ಮಧ್ಯಮಾವತಿ ರಾಗ ಮುಂತಾದ ಅಪೂರ್ವ ರಾಗಗಳಲ್ಲಿ, ಭಾಮಿನಿ ದ್ವಿಪದಿ, ವಾರದತ್ಯ ಮುಂತಾದ ಛಂದಸ್ಸುಗಳಲ್ಲಿ ಈ ಕೃತಿ ರಚಿತವಾಗಿದೆ. ಇವುಗಳನ್ನು ಗಮನಿಸಿದರೆ ಪರಂಪರಾನುಗಳ ಚೌಕಟ್ಟಿನಲ್ಲೇ ಈ ಕೃತಿ ರಚಿತವಾಗಿರುವುದು ಸ್ಪಷ್ಟವಾಗುತ್ತದೆ. ಆದರೆ ಇದರ ಸೊಗಸಿರುವುದು ಈ ಸಾಂಪ್ರದಾಯಿಕ ಚೌಕಟ್ಟಿನ ಒಳಗಡೆಯೇ ಕವಿ ಉಜ್ವಲವಾಗೇ ನಿರೂಪಿಸಿರುವ ಕಥಾ ವಿನ್ಯಾಸ ಜನಪದದ ಸೊಗಡಿನ ಭಾಷೆ, ಕುತೂಹಲ ಕೆರಳಿಸುವ ಅರ್ಥಪೂರ್ಣ ಸಂವಾದಗಳಲ್ಲಿ. ಶ್ರೀ ಬಿದರಹಳ್ಳಿ ಅವರು ಈ ಕೃತಿಯ ವಿನ್ಯಾಸವನ್ನು ಹಿಡಿದಿಡುವಾಗ ತಮ್ಮ ಸಹೃದಯತೆ ಹಾಗೂ ವಿಮರ್ಶಕ ಶಕ್ತಿಗಳೆರಡನ್ನೂ ಮೆರೆದಿದ್ದಾರೆ. ಈಗ ಪ್ರಚಲಿತವಿರುವ ಜಾಂಬವತಿ ಕಲ್ಯಾಣದ ಪ್ರಸಂಗಗಳ ಜೊತೆಯಲ್ಲೇ ಪ್ರಸ್ತುತ ಕೃತಿಯನ್ನು ತೌಲನಿಕವಾಗಿ ಅಭ್ಯಸಿಸಿ ಇದರ ಹಿರಿಮೆಯನ್ನು ಹಿಡಿದಿಟ್ಟಿದ್ದಾರೆ. ಸರಳತೆ, ನಿರರ್ಗಳತೆ ಹಾಗೂ ಭಾಷಾ ಸೌಂದರ್ಯ ಈ ಕೃತಿಯಲ್ಲಿ ನಿಚ್ಚಳವಾಗಿ ಮೈದೋರಿದೆ. ಇಂಥದೊಂದು ವಿಶಿಷ್ಟ ಕೃತಿಯನ್ನು ಬಹು ಪರಿಶ್ರಮದಿಂದ ಸಿದ್ಧಗೊಳಿಸಿಕೊಟ್ಟಿರುವ ಹಾಗೂ ಇದಕ್ಕೆ ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದು ಮೌಲಿಕತೆಯನ್ನು ಹೆಚ್ಚಿಸಿರುವ ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ ಅವರಿಗೆ ಅಕಾಡೆಮಿಯ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ತಪ್ಪಿಲ್ಲದಂತೆ ಸುಂದರವಾಗಿ ಮುದ್ರಿಸಿಕೊಟ್ಟಿರುವ ರಶ್ಮಿ ಮುದ್ರಣ ಮಾಲೀಕರು ಮತ್ತು ಸಿಬ್ಬಂದಿವರ್ಗಕ್ಕೆ ಸಹ ನಮ್ಮ ಕೃತಜ್ಞತೆಗಳು.

**ಡಾ॥ ಎಚ್. ಜೆ. ಲಕ್ಕಪ್ಪಗೌಡ**
ಅಧ್ಯಕ್ಷರು

# ಪ್ರಸ್ತಾವನೆ

## ೧

ಅಮ್ಮನ ಹಿಂದೆ ಅಡಗಿಕೊಳ್ಳುತ್ತಿದ್ದ ವಯಸ್ಸಿನಿಂದಲು ನಾನು ಈ 'ಜಾಂಬವತಿ ಕಲ್ಯಾಣ'ದ ಹಾಡಿಗೆ ಕಿವಿಯಾಗುತ್ತಲೆ ಬೆಳೆದಿದ್ದೇನೆ. ಕಂಚಿನ ಗಂಟೆಯಂಥ ಅಮ್ಮನ ಕಂಠದಿಂದ ಹೊಮ್ಮುತ್ತಿದ್ದ ಹಾಡು ನನ್ನ ಬಗೆಗಣ್ಣ ಬಯಲಿನಲ್ಲಿ ನುಡಿಯು ನಾಟಕವಾಗಿ ಮೂಡುತ್ತಿತ್ತು. ನಾನು ನವಿರೇಳುತ್ತಿದ್ದೆ. ಹೀಗೆ ಅಮ್ಮ ನನ್ನೊಳಗೆ ಒಬ್ಬ ನಾದಪ್ರಿಯ, ಒಬ್ಬ ಕಾವ್ಯಪ್ರೇಮಿ ನೆಲೆಯೂರುವಂತೆ ಮಾಡಿಬಿಟ್ಟಳು. ಅಲ್ಲಿಂದಿತ್ತ ಬೇಕಾದಷ್ಟು ಬಾರಿ ದಿನವಿಡಿ ಕೂತು ಈ ಪ್ರಸಂಗವನ್ನು ಕೇಳುತ್ತ, ಅದರ ರಾಗಗಳ ಮಟ್ಟುಗಳಿಗೆ ತಲೆದೂಗುತ್ತ, ಅಲ್ಲಿನ ಚಿತ್ರಶಕ್ತಿಗೆ, ಶಬ್ದ ಸಂಪತ್ತಿಗೆ ಬೆರಗಾಗುತ್ತ ಬಂದಿದ್ದೇನೆ.

ಅಮ್ಮನ ಅನ್ನಿಸಿಕೆಯ ಪ್ರಕಾರ 'ಜಾಂಬವತಿ ಕಲ್ಯಾಣ'ವನ್ನು ಬರೆದವರು ಅಮ್ಮನಪ್ಪ ಅಂದರೆ ನಮ್ಮಜ್ಜ ಕಲ್ಲಾಪುರದ ಗುರಾಯಾಚಾರ್ರು. ಹಾವೇರಿ ತಾಲೂಕಿನ ಕಲ್ಲಾಪುರದ ಮಂತ್ಯಾನದವರು ಇವರು. ಶಿವಮೊಗ್ಗ ಹಾರ್ನಳ್ಳಿಗಳಲ್ಲಿ ಶಾಲಾ ಮಾಸ್ತರರು ಆಗಿದ್ದವರು. ವೀಣೆ ನುಡಿಸಲು ಹಾಡಲು ಬಲ್ಲವರಾಗಿದ್ದರು. ದೊಡ್ಡ ಗಾತ್ರದ ಮಣ್ಣಿನ ಪ್ರತಿಮೆಮಾಡಿ ಮೈಸೂರು ಮಹಾರಾಜರ ಮೆಚ್ಚುಗೆ ಗಳಿಸಿದವರು. ಅಲ್ಲದೆ ಶ್ರೀ ರಾಘವೇಂದ್ರ ಸ್ತೋತ್ರವನ್ನು ಕನ್ನಡಿಸಿದವರು.

ಅವರು ಕಾಲವಾದಾಗ ನಮ್ಮಮ್ಮ ಇನ್ನೂ ಮೂರೊ ನಾಲ್ಕೊ ವರ್ಷದ ಹುಡುಗಿಯಾಗಿದ್ದಳಂತೆ. ತಮ್ಮಪ್ಪನ ಬಗೆಗಿರುವ ಭಕ್ತಿಯಿಂದ ನಮ್ಮಮ್ಮನಿಗೆ ಅನ್ನಿಸಿರುವುದು ವಸ್ತುನಿಷ್ಠ ಸತ್ಯವೂ ಹೌದೆನ್ನಲು ತಕ್ಕ ಪುರಾವೆಗಳು ಸಿಕ್ಕಿದ್ದರೆ ಯಾವ ಬಿಕ್ಕಟ್ಟೂ ಇರುತ್ತಿರಲಿಲ್ಲ. ಆದರೆ ವಯಸ್ಸಿನಲ್ಲಿ ಅಮ್ಮನಿಗಿಂತ ತುಂಬ ಹಿರಿಯರಾದ ಅಮ್ಮನ ಅಕ್ಕ ಕಮಲಾಬಾಯಿಯವರ ಪ್ರಕಾರ ಗುರಾಯಾಚಾರ್ರ ಅಜ್ಜ ಅಣ್ಣಯ್ಯಾಚಾರ್ರು ಎಂಬುವರು 'ಜಾಂಬವತಿ ಕಲ್ಯಾಣ'ದ ಕರ್ತೃ. ಆ ಕೃತಿಯ ಹಸ್ತಪ್ರತಿಯ ಮೇಲೆ "ಅಣ್ಣಯ್ಯಾಚಾರ್ಯ ಕೃತ" ಎಂದು ಅರಗಿನ ಮಸಿಯಲ್ಲಿ ಬರೆದಿದ್ದುದಾಗಿ ಅವರು ನೆನಪು ತೋಡಿಕೊಳ್ಳುತ್ತಾರೆ. ಅಮ್ಮನ ಅಣ್ಣ ಬೋಧರಾಮಾಚಾರ್ರ ಅಭಿಪ್ರಾಯದಲ್ಲಿ ಈ ಕೃತಿಯನ್ನು ಬರೆದವರು ಯಕ್ಷಗಾಯನದ ಭಾರಿ ಖಯಾಲಿ ಇದ್ದವರೂ, ಗುರುರಾಯಾಚಾರ್ರ ಸೋದರಮಾವನವರೂ ಆಗಿದ್ದ ಆನಂದತೀರ್ಥಾಚಾರ್ರು. ಅವರು ಹೇಳುತ್ತ ಹೋದಂತೆ ಅವರಳಿಯ ಗುರುರಾಯಾಚಾರ್ರು ಬರೆದುಕೊಂಡರು ಎಂಬುದು ಇವರ ಅಭಿಪ್ರಾಯ.

ನಮ್ಮ ಹೇಳು–ಕೇಳು ಪರಂಪರೆ ಒಂದೆ ಮನೆತನದ ಸದಸ್ಯರಿಂದ ಎಷ್ಟು ವೈವಿಧ್ಯಮಯ ಹೇಳಿಕೆಗಳನ್ನು ಹೊರಡಿಸಿ, ಚಾರಿತ್ರಿಕ ಸತ್ಯದ ನಿಷ್ಕರ್ಷೆಯನ್ನು ಹೇಗೆ ಕ್ಲಿಷ್ಟಗೊಳಿಸುತ್ತದೆ ಎಂಬುದಕ್ಕೆ ಮೇಲಿನದು ಒಂದು ಉದಾಹರಣೆ ಅಷ್ಟೆ.

೨

ಕಡ್ಲೆಕಾಯಜ್ಜ ಎಂದು ನಾನು ಚಿಕ್ಕಂದಿನಲ್ಲಿ ಕರೆಯುತ್ತಿದ್ದ ಹೊನ್ನಾಳಿ ರಾಘವೇಂದ್ರಚಾರ್ರ ಸ್ಪಷ್ಟ ಅಭಿಪ್ರಾಯದಲ್ಲಿ 'ಜಾಂಬವತಿ ಕಲ್ಯಾಣ'ದ ಕರ್ತೃ ಯಾರೆಂದರೆ ಕಲ್ಲಾಪುರದ ಗುರಾಯಾಚಾರ್ರ ಅಪ್ಪನಪ್ಪ ಅಂದರೆ ಅಜ್ಜನಾಗಿದ್ದ ಕಲ್ಲಾಪುರದ ವೆಂಕಣ್ಣಾಚಾರ್ರು ಎಂಬುವರು. 1979-80 ರ ಸುಮಾರಿಗೆ ನಾನು ಮೈಸೂರಿಗೆ ಹೋಗಿ, ಆಗ ಅಲ್ಲಿದ್ದ ಹೊನ್ನಾಳಿ ರಾಘವೇಂದ್ರಾಚಾರ್ರನ್ನು ಸಂದರ್ಶಿಸಿದೆ. ಇವತ್ತಿಗೂ ಧ್ವನಿಮುದ್ರಿತಗೊಂಡು ನನ್ನ ಬಳಿ ಇರುವ ಅವರ ಮಾತನ್ನೆ ಕೇಳಿ : "ಹೊನ್ನಾಳಿಯಲ್ಲಿ ಈಗ ಸುಮಾರು ನೂರು ವರ್ಷದ ಹಿಂದೆ ಇದ್ದ ಕಲ್ಲಾಪುರದ ವೆಂಕಣ್ಣಾಚಾರ್ಯರು ಎಂಬ ವಿದ್ವಾಂಸರು ಸ್ವಂತ ರಚನೆ ಮಾಡಿ ಅದನ್ನ ('ಜಾಂಬವತಿ ಕಲ್ಯಾಣ'ವನ್ನ) ಪ್ರಸಿದ್ಧಪಡಿಸಿದ್ದಾರೆ. ಮತ್ತು ದಶಾವತಾರದ ಅಥವ ಭಾಗವತರ ಆಟವನ್ನು ಕೂಡ ಆಡಿಸಿದ್ದಾರೆ......ಈಗ ನಾನು ಮಾತನಾಡತಕ್ಕಂಥವನು ಹೊನ್ನಾಳಿ ರಾಘವೇಂದ್ರಚಾರ್ ಅಂತಹೇಳಿ. ನನಗೆ ಎಂಬತ್ತು ವರ್ಷ. ನಾನು ಪೆನ್ಷನ್ ಸ್ಕೂಲ್ ಮೇಷ್ಟ್ರಾಗಿದ್ದೇನೆ. ನಾನು ಸಹ ಆ ಜಾಂಬವತಿ ಕಲ್ಯಾಣದಲ್ಲಿ ಮುಖ್ಯ ಪಾತ್ರವನ್ನು ವಹಿಸಿ ಅಭಿನಯ ಮಾಡಿರುತ್ತೇನೆ. ಅದೂ ಅಲ್ದೆ ನನ್ನ ಜೊತೆಗೆ ಇನ್ನೂ ಎಂಟು ಹತ್ತು ಜನಗಳು ಹೊನ್ನಾಳಿಯವರು ಮತ್ತು ಅಯನೂರವರು ಸಹಾ ಸೇರಿಕೊಂಡು ಹೊನ್ನಾಳಿಯಲ್ಲೂ, ಅಯನೂರಲ್ಲೂ, ಹಾರ್ನಳ್ಳಿಯಲ್ಲೂ ಮತ್ತು ತಾಲೂಕು ಸೊರಟೂರು ಗ್ರಾಮ–ಇಷ್ಟು ಕಡೆಯಲ್ಲಿ ಈ ಜಾಂಬವತಿ ಕಲ್ಯಾಣ ಭಾಗವತರಾಟವನ್ನು ಅಥವ ಯಕ್ಷಗಾಯನ ಆಟವನ್ನು ಆಡಿ ಒಳ್ಳೆ ಹೆಸರನ್ನು ಕೂಡಾ ತೆಗೆದಿದ್ದೇವೆ.

"ಮತ್ತು ಅದೇ ಕಲ್ಲಾಪುರದ ವೆಂಕಣ್ಣಾಚಾರ್ಯರ ಪೌತ್ರ ಗುರುರಾಯಾಚಾರ್ರೊಂತ ಅಪ್ಪರ್ ಸೆಕೆಂಡರಿ ಪಾಸಾದರು, ಸ್ಕೂಲ್ ಟೀಚರ್ರಾಗಿ ಇದ್ರು. ಅವರೂ ಸಹ ಅವರ ಅಜ್ಜನಂತೆ ಕವನಗಾರ್ರು. ಮತ್ತು ರಾಘವೇಂದ್ರ ಸ್ತೋತ್ರವನ್ನು ಅವರು ಸ್ವಂತ ಕವಿತೆಯಿಂದ....ಹಾಡಿನ ರೂಪದಲ್ಲಿ ರಚನೆ ಮಾಡಿರತಕ್ಕಂಥವರಾಗಿದ್ದಾರೆ. ಅವರು ಕಲ್ಲಾಪುರದ ವೆಂಕಣ್ಣಾಚಾರ್ಯರ ಪೌತ್ರರು , ನಾನೀಗ ಮಾತನಾಡತಕ್ಕಂಥವನು ಆ ವೆಂಕಣ್ಣಾಚಾರ್ಯರ ದೌಹಿತ್ರ (ಮಗಳ ಮಗ). ಈ ರೀತಿ ನಮಗೆ ಅವರಿಗೆ ಸಮ್ಮಂಧ".

"ಅವರು ಆರು ಜನ ಅಣ್ಣ ತಮ್ಮಂದಿರು. ಎಲ್ಲ ದೊಡ್ಡ ದೊಡ್ಡ ವಿದ್ವಾಂಸರು ಕಲ್ಲಾಪುರದ ಅಣ್ಣಯ್ಯಾಚಾರ್ರು, ವೆಂಕಣ್ಣಾಚಾರ್ರು, ಮೂರ್ತ್ಯಾಚಾರ್ರು, ಯಾದವ್ವಾಚಾರ್ರು, ರಾಮಾಚಾರ್ರು........ಹೀಗೆ ಅವರು ಆರು ಜನ ಸ್ವಂತ ಅಣ್ಣ ತಮ್ಮಂದಿರುಗಳು. ಆ ಅಣ್ಣಯ್ಯಾಚಾರ್ರು ಅಂಬೋರು ಈ ಗುರ್ರಾಯ್ಯಾಚಾರ್ರಿಗೆ ತಂದೆಯ ತಂದೆ.

"ಆಯನೂರಲ್ಲಿ ಈ ಜಾಂಬವತಿ ಕಲ್ಯಾಣವನ್ನ ಆಡತಕ್ಕಂಥ ಕಾಲದಲ್ಲಿ ನಾನೆ ಜಾಂಬವತಿ ಪಾತ್ರವನ್ನ ಮಾಡತಕ್ಕಂಥವನಾಗಿದ್ದೆ. ಕೂಡ್ಲಿ ರಾಮಪ್ಪ ಅಂತ ಒಬ್ಬರು ಶಾನುಭೋಗರಿದ್ದರು. ಅವರು ಜಾಂಬವನ ಪಾತ್ರ ಮಾಡ್ತಿದ್ರು. ಪ್ರಾಣೇಶ್‌ರಾವ್ ಅಂತ ಒಬ್ಬವನಿದ್ದ ನಾಡಿಗರ ಪೈಕಿ. ಆತ ಕೃಷ್ಣನ ಪಾತ್ರವನ್ನ ಮಾಡ್ತಕ್ಕಂಥವ ನಾಗ್ತಿದ್ದ........ನಾನು ಕೃಷ್ಣನ ಪಾತ್ರವನ್ನೂ ಮಾಡಿದ್ದೆ ಇದೇ ಜಾಂಬವತಿ ಕಲ್ಯಾಣ ದಲ್ಲಿ. ಆ ಪ್ರಾಣೇಶರಾಯ ಅಂಬೋನು ಜಾಂಬವನ ಪಾತ್ರವನ್ನ ಮಾಡ್ತಿದ್ದ.... ನಾವೆಲ್ಲಾರು ಬದ್ಲಾಯಿಸಿಗೊಂಡು ಬದ್ಲಾಯಿಸಿಗೊಂಡು ಪಾರ್ಟುಗಳನ್ನ ಮಾಡ್ತ ಇದ್ವಿ. ಜಾಂಬವತಿ ಕಲ್ಯಾಣ ಒಂದೆ ಅಲ್ಲ ಬಬ್ರುವಾಹನ ಕಾಳಗ, ಕೃಷ್ಣ ಸಂಧಾನ ಇಂಥ ಭಾಗವತರಾಟಗಳನ್ನೆಲ್ಲ ನಾವು ಆಡ್ತ ಇದ್ವಿ.

"ಈ ಕಲ್ಲಾಪುರದ ಗುರಾಯಾಚಾರ್ರು ಅಂಬೋರಿಗು ಕೂಡಾ ಯಕ್ಷಗಾಯನದಲ್ಲಿ ಮೃದಂಗವನ್ನ ಬಾರಿಸ್ತಕ್ಕಂಥ ಅಭ್ಯಾಸ ಇತ್ತು ......ಯಕ್ಷಗಾಯನದ ಪ್ರಸಂಗವನ್ನ ಹೇಳತಕ್ಕಂಥವರಿಗೆ ಭಾಗವತರು ಅಂತ ಹೆಸರು. ನನ್ನ ಹೆಣ್ಣು ಕೊಟ್ಟ ಮಾವಂದಿರು ಆನಂದತೀರ್ಥಾಚಾರ್ರು ಅಂಬೋರು ಅದರಲ್ಲಿ ಒಳ್ಳೇ ಪ್ರಸಿದ್ಧರಾಗಿದ್ರು. ಹೊನ್ನಾಳಿ ಯಲ್ಲಿ ಹಾರ್ನಳ್ಳಿ ನಾಡಿಗ್ ಕೃಷ್ಣಪ್ಪ ಅಂಥೇಳಿ ಒಳ್ಳೆ ಪ್ರಸಿದ್ಧಿಯಾಗಿದ್ರು. ಮತ್ತು ಕಸಬಾ ನಾಡಿಗ್ ರಾಘವೇಂದ್ರಪ್ಪ ಅಂಬೋರು ಮೃದಂಗ ಬಾರಿಸ್ತಿದ್ರು...ಹೊನ್ನಾಳಿ ಯಲ್ಲಿ ಕೋಟೆಯಲ್ಲಿ, ಹಳೆ ತಾಲೂಕ್ ಕಛೇರಿ ಎದುರಿಗೆ ಭಾಗವತರಾಟವನ್ನು ಆಡ್ತಾ ಇದ್ವಿ.

"ನಾವು ಆಡಿರತಕ್ಕಂಥ ಯಕ್ಷಗಾಯನ ಆಟಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಕ್ಷಗಾಯನದ ಧಾಟಿ ಆಡ್ತಾರೊ ಅದೇ ಧಾಟಿಯಲ್ಲಿ ಆಡಿರತಕ್ಕಂಥವು...... ಕೆಲವರು ಈ ದಶಾವತಾರದ ಆಟಗಳನ್ನ ಬಯಲಾಟ ಅಂತ ಆಡ್ತಾರೆ, ಧಾರವಾಡ ಸೀಮೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ. ಅವರಿಗು ನಮಗು ಕೆಲವು ಭಾಗಗಳಲ್ಲಿ ವ್ಯತ್ಯಾಸಗಳಿವೆ. ಪದ-ಪದ್ಯಗಳನ್ನು ಹೇಳೋದರಲ್ಲಿ ವ್ಯತ್ಯಾಸ, ಮಾತನಾಡೋದರಲ್ಲಿ ವ್ಯತ್ಯಾಸ, ಮತ್ತು ಕುಣಿತದಲ್ಲು ಕೂಡ ಸ್ವಲ್ಪ ವ್ಯತ್ಯಾಸ ಬರ್ತದೆ.......ಮುಖ್ಯವಾಗಿ ಯಕ್ಷಗಾಯನಕ್ಕೆ ತವರೂರಾಗಿರತಕ್ಕಂಥದ್ದು ದಕ್ಷಿಣ ಕನ್ನಡ ಜಿಲ್ಲ. ಅಲ್ಲಿಯ ಯಕ್ಷಗಾಯನವೆ ಲೋಕಪ್ರಸಿದ್ಧವಾಗಿದೆ. ಅದನ್ನೆ ನಾವೂ ಇಲ್ಲಿ ಆಡತಕ್ಕಂಥವ

ರಾಗಿದ್ದೇವೆ......ನಾವು ಆಟ ಆಡತಕ್ಕಂಥ ಕಾಲದಲ್ಲಿ ನಮ್ಮ ವೇಷ ಭೂಷಣಗಳಿಗೆ ಮರದ ಸಾಮಾನುಗಳು, ಕಿರೀಟ, ಮುಡಿ ಇಂಥವುಗಳನ್ನೆಲ್ಲ ನಾವೆ ಸ್ವಂತ ಮಾಡಿಟ್ಟು ಕೊಂಡು ಬಿಡದ್ವಿ. ನಾವೆ ಬಣ್ಣ ಗಿಣ್ಣ ಎಲ್ಲ ಹಚ್ಚಿಕೊಂಡು ಮಾಡ್ತ ಇದ್ವಿ. ಬೇರೆ ಕಡೆಯಿಂದ ಬಾಡಿಗೆ ವಗ್ಯೆರೆ ತರ್ತಿದ್ದಿಲ್ಲ....ಜನಗಳು ಖುಷಿಗೆ ದುಡ್ಡು ಕೊಡ್ತಾ ಇದ್ದರೆ ವಿನಹ, ನಾವು ದುಡ್ಡುತೊಗೊಂಡು ಇಂಥ ಆಟ ಆಡ್ತೀವಿ ಅಂತ ಎಲ್ಲೂ ಆಡಿಲ್ಲ. ಖ್ಯಾತಿಗೋಸ್ಕರವಾಗಿ ಆಡಿರತಕ್ಕಂಥಾದ್ದು....ನಮ್ಮ ಮನಸಿನ ಉಮೇದಿನಿಂದ ಆಡಿರೋಂಥಾದ್ದು.

"ನಾವು ವೇಷ ಭೂಷಣಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ಇವಾಗ ಕಿರೀಟ ಧಾರಣೆ, ಮುಡಿಕಟ್ಟಿಕೊಳ್ಳೋದು, ಮೈಮೇಲೆಲ್ಲ ಮರದ ಆಭರಣಾದಿಗಳನ್ನ ಮಾಡಿಕೊಳ್ಳೋದು ಬೇಗಡೆಯಿಂದ, ಕನ್ನಡಿಯಿಂದ ರಚಿತ....ಅದೇ ಧಾಟಿಯಲ್ಲಿ ನಾವೂ ಮಾಡಿಕೊಂಡಿದ್ದೀವಿ....ಆ ವೇಷಭೂಷಣಗಳನ್ನ ಮರದ ಸಾಮಾನುಗಳಿಂದ ಮಾಡಿರ್ತಾರೆ. ಅದಕ್ಕೆ ಬೇಗಡೆ ಹಚ್ಚಿರ್ತಾರೆ. ಜೀರುಗುಂಬಿ ರೆಕ್ಕೆಗಳನ್ನ ಅಲಂಕಾರಕ್ಕೆ ಹಚ್ಚಿರ್ತಾರೆ, ಮತ್ತು ಕನ್ನಡಿ ಹರಳುಗಳನ್ನು ಸೇರಿಸಿರ್ತಾರೆ, ಆ ಕಿರೀಟಾದಿಗಳಿಗೆ. ಭುಜಕೀರ್ತಿ ಎದೆಹಾರ ಇವುಗಳೆಲ್ಲ ಉಂಟು ಅದರಲ್ಲಿ. ಸ್ತ್ರೀಪಾರ್ಟಿಗೆ ಪೀತಾಂಬ್ರ, ಒಳ್ಳೊಳ್ಳೆ ಸೀರೆಗಳನ್ನು ಉಟ್ಟುಕೊಂಡು ಪ್ರಮೀಳೆ ಪಾರ್ಟು, ರುಕ್ಮಿಣಿ ಪಾರ್ಟು, ಜಾಂಬವತಿ ಪಾರ್ಟು ಇದಕ್ಕೆಲ್ಲ ಡ್ರಾಮಾದೆಂತೇನೆ ಸ್ತ್ರೀ ಪಾರ್ಟನ್ನ ಮಾಡಿ ಆಡ್ತಾ ಇದ್ವಿ....ಸ್ತ್ರೀ ಪಾರ್ಟಿಗು ಪುರುಷ ಪಾರ್ಟಿಗು ಕುಣಿತವೂ ಉಂಟು.

"ಮೊದಲು ಹುಡುಗರಾಗಿದ್ದಾಗ ಆ ಕುಣತವನ್ನೆಲ್ಲ ಸಪ್ತತಾಳಕ್ಕನುಸಾರವಾಗಿ ಗೆಜ್ಜೆ ಕಟ್ಟಿಕೊಂಡು ಅಭ್ಯಾಸ ಮಾಡ್ತಿದ್ವಿ. ಆಮೇಲೆ ನಮಗೆ ಬೇಕಷ್ಟು ಪ್ರಶಸ್ತಿ ಬಂದ್‌ಬಿಡ್ತು. ನಾವೇ ಕುಣಿತಾ ಇದ್ವಿ.... ಆಮೇಲೆ ರಾಜ ಪಾರ್ಟು ಮಾಡ್ತಕ್ಕಂಥ ವನಿಗೆ ಒಡ್ಡೋಲಗಾಂತ ಆಗ್ತಾ ಇತ್ತು. ಆ ಒಡ್ಡೋಲಗದಲ್ಲಿ ಕೂಡಾ ಅದಕ್ಕೂ ಬೇರೆ ಕುಣಿತ....ಅದರ ಹೆಜ್ಜೆ ಕ್ರಮವೆ ಬೇರೆ ಇದೆ. ಬಾಕಿ ಡೈಲಾಗ್ಸ್‌ನಲ್ಲಿ ಮಾತಾಡಬೇಕಿದ್ರೆ ಅದರಲ್ಲಿ ಕುಣಿತದ ಹೆಜ್ಜೆ ಪಾಡೆ ಬೇರೆ ಇದೆ.

"ಸ್ಟೇಜು ಸಿಂಪಲ್ಲಾಗೆ ಇರೋದು. ಜಾಸ್ತಿ ಉಮೇದುವಾರರಿದ್ದೋರು ಬಾಳೆ ಕಂಬ ಕಟ್ಸಿ ಮಾಡ್ತೋರು. ಅಷ್ಟೆ ವಿನಃ ಸ್ಟೇಜಿಗೋಸ್ಕರವಾಗಿ ಪ್ಲಾಟ್‌ಫಾರಂ ಹಾಕಿ ಅವೆಲ್ಲ ಏನ್ ಮಾಡ್ತಾ ಇದ್ದಿಲ್ಲ. ನೆಲದಮೇಲೇನೆ ನಾವು ಅದನ್ನ ಮಾಡೋದು. ಒಡ್ಡೋಲಗದಲ್ಲಿ ಕುಣೀಬೇಕಾದ್ರೆ ಆ ಮೃದಂಗದ ತಾಳಕ್ಕೆ ತಕ್ಕ ಹಾಗೆ ಸಾಧಾರಣ ಎರಡಡಿ ಎರಡೂವರಡಿ ಹಾರ್ಕೊಂಡು ಕುಣೀತಾ ಇದ್ವಿ. ಅದಕ್ಕೆ ಒಡ್ಡೋಲಗದ ಕುಣಿತ ಅಂತಾರೆ, ಕುಣಿಚಟ್ಟು ಅಂತಾರೆ.

"ಒಡ್ಡೋಲಗಕ್ಕೆ ಕರೀಬೇಕಾದ್ರೆ......ಇಂಥ ದೇಶದ ಅರಸರು ಒಡೋಲಗಸ್ಥ ರಾಗಿ ಬರ್ತಾರೆ ಅಂತ ಭಾಗವತರು ಹೇಳೋ ಪದ್ಧತಿ. ಅದಕ್ಕೆ ಮೃದಂಗದ ತಾಳಗಳು: ತೈತಥಾ । ಧಿತ್ತಾ ಕಿಟತಕತಾ ಧಿತ್ತಾ । ಧಿತ್ತೈಕ ತೈಕ ಧಿತ್ತಾ ಕಿಟತಕತಾ ಧಿತ್ತಾ । ಅಂತ ಈ ರೀತಿ ಮೂರು ಸಾರಿ ಕುಣೀಬೇಕು. ಆಮೇಲೆ ಧೀನ್ ಧೀನ್ ಧೀನ್ ಅಂತ ಮೂರು ಸಾರಿ ಕುಣಿಚಟ್ಟು ಹಾರೋದು. ಹೀಗ್ಮಾಡ್ಕೊಂಡು ಅದರ ತತ್ಕಾರಿಕೆಅಂತಾರೆ ಅಥವಾ ಬೋಲ್ ಅಂತಾರೆ. ಇಂಥವದನ್ನೆಲ್ಲ ಹೇಳಿಕೊಂಡು ಮೂರು ಸಾರಿ ಕುಣಿದ ಮೇಲೆ ಆ ಭಾಗವತರು ಪರಾಕ್ ಹೇಳ್ತಾರೆ.....ಇಷ್ಟು ಒಡ್ಡೋಲಗದ ಕ್ರಮ.

"ಜಾಂಬವತಿ ಕಲ್ಯಾಣ ಪ್ರಸಂಗ ಬರೆದಿರತಕ್ಕಂಥ ಕಲ್ಲಾಪುರದ ವೆಂಕಣ್ಣಾಚಾರ್‍ರೆಂಬೋರು ಅದರ ಕಥೆಯನ್ನ ಭಾಗವತ ಭಾರತ ಇಂಥ ಪುರಾಣಗಳಿಂದ ಅರಿಸಿಕೊಂಡು ಅದಕ್ಕೆ ಸಂಬಂಧಪಟ್ಟಹಾಗೇನೆ ಅದನ್ನ ರಚನೆ ಮಾಡಿದಾರೆ....ಅವರು ಕಲ್ಲಾಪುರದ ಗುರಾಯಾಚಾರ್‍ರ ತಂದೆಯ ತಂದೆಯ ತಮ್ಮ. ಅವರು ಗುರಾಯಾಚಾರ್‍ರ ಚಿಕ್ಕಜ್ಜ".

ಹೀಗೆ ಸವಿವರವಾಗಿ ಜಾಂಬವತಿ ಕಲ್ಯಾಣದ ಕರ್ತೃವಿನ ಬಗ್ಗೆ, ಆ ಕೃತಿಯ ಬಗ್ಗೆ ಅದನ್ನ ಆಡಿದ ಅನುಭವದ ಬಗ್ಗೆ ಮಾತಾಡಿದ ಕಡ್ಲೇಕಾಯಜ್ಜ ನಿರರ್ಗಳವಾಗಿ ಪ್ರಸಂಗದ ಕೆಲವು ಮಟ್ಟುಗಳನ್ನ ಹಾಡಿ ತೋರಿಸಿ ನನ್ನನ್ನ ಬೆರಗುಗೊಳಿಸಿದರು. ಅವರನ್ನು ಪುನಃ ನಾನು ನೋಡಿದ್ದು ಎರಡು ಮೂರು ವರ್ಷಗಳ ನಂತರ, ಬೆಂಗಳೂರಿನ ಅವರ ಮಗನ ಮನೆಯಲ್ಲಿ. ಅವರು ಹಾಸಿಗೆ ಹಿಡಿದಿದ್ದಾರೆಂದು ಕೇಳಿ ಅಲ್ಲಿಗೆ ಹೋದೆ. ಅವರ ಬಾಯಿ ಹೋಗಿಬಿಟ್ಟಿತ್ತು. ಕಣ್ಣಲ್ಲಿ ದಳದಳ ನೀರು ಉಕ್ಕಿ ಬಂತು. ನನಗೆ ಏನೇನೊ ಹೇಳಬೇಕೆಂದು ಕೈ ಸನ್ನೆ, ಬಾಯಿ ಸನ್ನೆ ಮಾಡಿಯೆ ಮಾಡಿದರು. ನನಗೆ ಅರ್ಥವಾಗುತ್ತಿಲ್ಲವಲ್ಲ ಎಂದು ಸೋತು ಕೈ ಕೊಡವಿ ಒದ್ದಾಡಿದರು ಆ ಪ್ರಸಂಗ ನಾನಿರುವವರೆಗು ನನಗೆ ಮರೆಯುವುದಿಲ್ಲ. ನಿಸ್ಸಹಾಯಕನಾಗಿ ಹೊರಟು ಬಂದೆ. ಮುಂದೆ ಕೆಲವೇ ದಿನಗಳಲ್ಲಿ ಅವರು ಕಾಲವಾದರೆಂಬ ಸುದ್ದಿ ಬಂದುಮುಟ್ಟಿತು.

೩

ಘಂಟೆ ಹೊಡೆದಂತೆ ಹೇಳಿರುವ ಹೊನ್ನಾಳಿ ರಾಘವೇಂದ್ರಾಚಾರ್‍ರು, ಉರುಫ್ ಕಲ್ಲಾಪುರದ ರಾಘವೇಂದ್ರಾಚಾರ್‍ರ, ಅಥೆಂಟಿಕ್ ಸಾಕ್ಷ್ಯಾಧಾರಗಳಿಂದ 'ಜಾಂಬವತಿ ಕಲ್ಯಾಣ' ಪ್ರಸಂಗದ ಕರ್ತೃ ಕಲ್ಲಾಪುರದ ವೆಂಕಣ್ಣಾಚಾರ್‍ರೇನೇ ಎಂದು ತೀರ್ಮಾನಕ್ಕೆ ಬರಲು ಸಾಧ್ಯವಿದೆ. ಪ್ರಾರಂಭದಲ್ಲೆ ಬರುವ 'ಶ್ರೀ ಶ ಜಯ ವೆಂಕಟನೆ' ಎಂಬುದು ಮನೆತನದ ದೇವರ ಹೆಸರೊ ಅಥವಾ ಒಂದು ಬಗೆಯ ಅಂಕಿತವೊ ಹೇಳಬರುವಂತಿಲ್ಲ.

ಆದರೆ ಕಮಲಾಬಾಯಿಯವರು ಕಂಡಿದ್ದ 'ಅಣ್ಣಯ್ಯಾಚಾರ್ಯಕೃತ' ಎಂಬ ಲಿಖಿತವೊಂದು ನಮ್ಮ ತೀರ್ಮಾನಕ್ಕೆ ಅಡ್ಡಿ ಒಡ್ಡುತ್ತದೆ.

ನಮ್ಮ ಜಾನಪದರು ನಿರಹಂಕಾರಿಗಳಷ್ಟೆ ಆಗಿರಲಿಲ್ಲ; ಕೃತಿ ಸ್ವಾಮ್ಯ ವೈಯಕ್ತಿಕ ಖ್ಯಾತಿ ಮುಂತಾದ ಸಂಗತಿಗಳ ಬಗ್ಗೆ ಪೂರಾ ನಿರ್ಲಿಪ್ತರು ಕೂಡಾ. ತಮ್ಮ ಹೆಸರು ಹಚ್ಚದೆ ಹಾಡಿಕೊಂಡು ಹೋದ ಕೋಟ್ಯಾಂತರ ಜನಪದ ಕವಿಗಳ ನಂತರ ಈಗ ಹೆಸರಾಸೆಯ ಕವಿಗಳ ದಂಡು ಕಾಲಿಡುತ್ತಿದೆ. ಈ 'ಜಾಂಬವತಿ ಕಲ್ಯಾಣ'ದ ಕರ್ತೃ ಜನಪದ ಕವಿಗಳ ಎಲೆಮರೆಯ ನೆರಳಿಗೂ, ಅಂಕಿತ–ಲಿಖಿತಗಳ ಹೊಸಕೂಗಳ ಸ್ವಯಂ ಪ್ರಭೆಗೂ ನಡುವೆ ನಿಲ್ಲುವಂತೆ ಕಾಣುತ್ತದೆ. ಇದು ಸದ್ಯಕ್ಕಂತು ಅನಿವಾರ್ಯವೇ ಆಗಿ ಕಾಣುತ್ತಿದೆ.

ಬಾಲ್ಯದಿಂದಲು ನನ್ನನ್ನು ಕಾಡುತ್ತಿದ್ದ 'ಜಾಂಬವತಿ ಕಲ್ಯಾಣ'ವನ್ನು ನಾನು ಕೆಲಸಕ್ಕೆ ಸೇರಿದ ಮೇಲೆ ಅಮ್ಮನಿಂದ ಪದೆ ಪದೆ ಹಾಡಿಸಿ, ಅದಕ್ಕೂ, ಅವಳು ತನ್ನ ಮೈದುನ ಶ್ರೀಪತಿ ಆಚಾರ್‍ರಿಂದ ತೆಗೆಸಿದ ಅದರ ಹಸ್ತಪ್ರತಿಗೂ ತಾಳೆ ನೋಡುತ್ತ ಹೊಸದಾಗಿ ನಕಲು ಮಾಡಿದೆ. ನನ್ನ ತಮ್ಮ ವಾಸು ಅದರ ಬೆರಳಚ್ಚು ಪ್ರತಿಗಳನ್ನ ತೆಗೆದ. ಅದನ್ನ ಪರಿಶೀಲಿಸಲೆಂದು ತೀರ್ಥಹಳ್ಳಿಯಲ್ಲಿದ್ದ ಮಿತ್ರ ಎನ್. ಶ್ರೀನಿವಾಸ್ನ ಉಡುಪರಿಗೆ ಕೊಟ್ಟಿದ್ದೆ. ಅವರೂ ಅವರ ಅಣ್ಣ ಗೋಪಾಲಕೃಷ್ಣ ಉಡುಪರೂ ಅದನ್ನ ಓದಿ ಒಂದಿಷ್ಟು ಸೂಚನೆ ನೀಡಿದರು.

ಪಾರ್ತಿ ಸುಬ್ಬ ಕವಿಯ ಯಕ್ಷಗಾನ ಪ್ರಸಂಗಗಳೊಡನೆ ಹೋಲಿಸಿ ನೋಡಿದಾಗ ಈ 'ಜಾಂಬವತಿ ಕಲ್ಯಾಣ' ಕೂಡ ಒಂದು ಗಟ್ಟಿಯಾದ ಯಕ್ಷಗಾನ ಕಲಾಕೃತಿ ಎಂದು ಮನದಟ್ಟಾಯಿತು. ಈ ಪ್ರಸಂಗವನ್ನು ಓದಿ ನಾಕು ಮಾತು ಬರೆದುಕೊಡಿ ಎಂದು ಡಾ. ಶಿವರಾಮಕಾರಂತರನ್ನ ಕೇಳಿಕೊಂಡೆ. ಅವರು "ಗೊತ್ತಿಲ್ಲದ ವ್ಯಕ್ತಿಯ ಪ್ರಸಂಗಕ್ಕೆ ನನ್ನ ಮುನ್ನುಡಿ ಬೇಕಿಲ್ಲ" ಎಂದು ತಮ್ಮ ಸುವಿಖ್ಯಾತ ಶೈಲಿಯಲ್ಲಿ ಉತ್ತರಕೊಟ್ಟರು. ಕವಿಯ ಹೆಸರು ನಿಕ್ಕಿಯಾಗದಿದ್ದರೇನು ಕೃತಿ ಅಚ್ಚುಗಟ್ಟಾಗಿದೆಯಲ್ಲ ಎಂದು 'ಜಾಂಬವತಿ ಕಲ್ಯಾಣ'ವನ್ನು ಪ್ರಕಟಿಸಲು ಆಕಾಡೆಮಿಗೆ ಒಪ್ಪಿಸಿದೆ.

ದೊಂಬೆಯ ಡಿ.ವಿ. ಶಿವರಾಮಯ್ಯನವರಲ್ಲಿ "ಯಕ್ಷಗಾನ ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮಾ ಪರಿಣಯ" ಎಂಬ ಮತ್ತೊಂದು ಮುದ್ರಿತ ಪುಸ್ತಕ ದೊರೆಯಿತು. ಅದು 1972 ರಲ್ಲಿ ಉಡುಪಿಯ ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರು ಪ್ರಕಟಿಸಿರುವ 26 ಪುಟಗಳ ಪುಸ್ತಿಕೆ. ಅದನ್ನೂ ಇದನ್ನೂ ಹೋಲಿಸಿ ನೋಡಿದೆ. ಎರಡಕ್ಕೂ ಪುರಾಣ ಮೂಲ ಒಂದೆ ಆದರೂ ಭಾಷಾ ಬಳಕೆ ಮತ್ತು ಮಾತಿನ ಶೈಲಿಯಲ್ಲಿ ವ್ಯತ್ಯಾಸ ಕಂಡಿತು. ಉಡುಪಿ ಪುಸ್ತಕದ ಭಾಷೆ ಕರಾವಳಿಯ ಯಕ್ಷಗಾನ ಪಂಡಿತರ ಗ್ರಂಥಸ್ಥ ಭಾಷೆಯಾದರೆ ಹೊನ್ನಾಳಿ ಹಸ್ತಪ್ರತಿಯದು ಬಯಲುನಾಡಿನ ಭಾಷೆಯಾಗಿ, ಅದರಲ್ಲೂ ಹೊನ್ನಾಳಿ ಕೋಟೆ ವಾಸಿಗಳ ಆಡುಮಾತಿನ

ಶೈಲಿಯ ಭಾಷೆಯಾಗಿ ಕಂಡಿತು. ವೈಷ್ಣವರ ಮನೆಮಾತಿನ ಖಾಸಾ ಪದಪುಂಜಗಳು ಈ ಯಕ್ಷಗಾನ ಪ್ರಸಂಗದ ಶಬ್ದಸಂಪತ್ತಿನಲ್ಲಿ (diction) ಸೇರಿವೆ. ಒಂದೆ ಕಥೆಯನ್ನಾಧರಿಸಿದ ಹಲವಾರು ಕಾವ್ಯಗಳಿಲ್ಲವೆ ? ವಿಜಯನಗರದ ಅರಸ ಶ್ರೀಕೃಷ್ಣದೇವರಾಯನೂ 'ಜಾಂಬವತಿ ಕಲ್ಯಾಣ' ಎಂಬ ಸಂಸ್ಕೃತ ಕಾವ್ಯ ಬರೆದಿದ್ದಾನಂತೆ.

ಹೊನ್ನಾಳಿಯ ಈ 'ಜಾಂಬವತಿ ಕಲ್ಯಾಣ'ದ ಮೊದಲ ಪುಟದಲ್ಲೆ ಬರುವ ಜಯರಾಯರ, ವಾದಿರಾಜರ, ಮಂತ್ರಾಲಯೀಶರ ಸ್ತುತಿಯಿಂದಾಗಿ ಈ ಕೃತಿಯನ್ನು ಭಾಗವತ ಸಂಪ್ರದಾಯದ ವೈಷ್ಣವ ಕವಿ ರಚಿಸಿರುವ ಸಂಗತಿ ಸಿದ್ಧವಾಗುತ್ತದೆ. ಅಲ್ಲದೆ "ಶ್ರೀನಿವಾಸಾರ್ಯ ಗುರು ಮಾನವೋತ್ತಮರ ಧ್ಯಾನಿಸುತ ಪೇಳ್ವೆ" ಎಂಬ ಸಾಲು ಈ ಕೃತಿ ಹೊನ್ನಾಳಿಯಲ್ಲೆ ರಚಿತವಾಗಿದೆ ಎಂಬುದನ್ನ ಸಾಬೀತು ಮಾಡುತ್ತದೆ. ಯಾಕೆಂದರೆ ವೈಷ್ಣವ ಪರಂಪರೆಯ ಮುಖ್ಯಪ್ರವಾಹದ ಮಂತ್ರಾಲಯೀಶರ ದ್ವಿತೀಯ ವೃಂದಾವನ ಸ್ಥಾಪಿತವಾಗಿರುವ ಹೊನ್ನಾಳಿಯಲ್ಲೆ ಅವರ ಆಪ್ತ ಸಮಕಾಲೀನರೂ, ಅಧ್ಯಾತ್ಮದ ಸಂಗಾತಿಗಳೂ ಆಗಿದ್ದ, ವೈಷ್ಣವ ಪರಂಪರೆಯ ಕಿರುತೊರೆಯ ವಿರಕ್ತರಾಗಿದ್ದ ಬಿದರ ಹಳ್ಳಿ ಶ್ರೀನಿವಾಸ ತೀರ್ಥರ ಸಮಾಧಿಯೂ ಇದೆ. ಹೊನ್ನಾಳಿಯ ಸೇತುವೆ ಕೆಳಗೆ ಹೊಳೆದಂಡೆಯ ಮೇಲೆ ನಿರಾಡಂಬರವಾಗಿ ನಿಂತಿರುವ ಹನುಮಪ್ಪನ ಗುಡಿಯ ಹಿಂಭಾಗ ದಲ್ಲಿ ಈ ಲಿಂಗರೂಪಿ ಸಮಾಧಿ ಸಾಮರಸ್ಯದ ಮೌನಧ್ಯಾನದಲ್ಲಿರುವಂತಿದೆ. ಜಾಂಬವತಿ ಕಲ್ಯಾಣದ ಕರ್ತೃ ಶ್ರೀನಿವಾಸ ತೀರ್ಥರನ್ನು ಸ್ಮರಿಸಿರುವುದು ಆಗಿನಕಾಲದ ಹೊನ್ನಾಳಿ ಯಲ್ಲಿ ಇವರ ಬಗೆಗಿದ್ದ ಭಕ್ತಿಯನ್ನು ಸೂಚಿಸುತ್ತದೆ.

ಳ

ಪುರಾಣ ದಂತಕತೆ ದೃಷ್ಟಾಂತಗಳನ್ನು ಇಡಿಯಾಗಿ ಸಿಪ್ಪೆ ಸಮೇತ ನುಂಗುವುದು ತಪ್ಪು. ಅವುಗಳ ಸಿಪ್ಪೆ ಸುಲಿದು ಒಳಗಿನ ಆಶಯದ ಕಾಳುಗಳನ್ನು ಮೆಲ್ಲಬೇಕು. 'ಜಾಂಬವತಿ ಕಲ್ಯಾಣ'ದಲ್ಲಿ ಇಂಥ ಎರಡು ಸದಾಶಯಗಳನ್ನು ಗುರುತಿಸಬಹುದು. ಕಥಾವಂತಿಕೆ ಸೊಗಸುಗಾರಿಕೆಯ ಕೆಳಗೆ ಸಾಮರಸ್ಯದ ಸಾಂಕೇತಿಕ ಸಂದೇಶ ಅಂತರ್ಜಲ ದಂತೆ ಹರಿಯುತ್ತಿವೆ. ಶಿಷ್ಟ ಸಂಸ್ಕೃತಿಯ ಕ್ಷತ್ರಿಯ ವೀರನಾದ ರಾಮನನ್ನೂ ಪರಿಶಿಷ್ಟ ಸಂಸ್ಕೃತಿಯ ಗೊಲ್ಲರ ಮುಖಂಡನಾಗಿ ಬೆಳೆದ ಕೃಷ್ಣನನ್ನೂ ಪರಸ್ಪರ ಸಮೀಕರಿಸಿ, ಅವರಿಬ್ಬರ ಆದರ್ಶಗಳೂ ಒಂದೇ ಬಗೆಯವು ಎಂದು ಸಾರುವುದು ಈ ಕತೆಯ ಮೊದಲ ಆಶಯವಾಗಿದೆ. ಆ ಮೂಲಕ ಜಾಂಬವನಂಥ ಕಟ್ಟಾ ಭಕ್ತರು ತಮ್ಮ ಭಕ್ತಿಯಲ್ಲಿ ದಿಕ್ಕು ತಪ್ಪಿಹೋಗದೆ, ಆದರ್ಶದ ಐಕ್ಯತೆಯನ್ನು ಗುರ್ತಿಸಿ ಆದರಿಸಬೇಕು ಎಂಬ ಸಂದೇಶವಿದೆ ಇಲ್ಲಿ.

ಎರಡನೆ ಆಶಯ ಕಾಡು-ನಾಡುಗಳ ಸಾಮರಸ್ಯ ಕುರಿತದ್ದಾಗಿದೆ. ಆ ಮೂಲಕ ಪ್ರಾಕೃತಿಕ ಮತ್ತು ನಾಗರಿಕ ಪರಿಸರಗಳ ಐಕ್ಯತೆಯನ್ನು ಧ್ವನಿಸುವಂಥದ್ದಾಗಿದೆ.

ಪರಿಸರ ಸಮತೋಲನವೆ ಈ ಕಥೆಯ ಅಂತರಾಳವಾಗಿದೆ. ಪ್ರಸೇನ ನಾಗರಿಕ ದರ್ಪ, ದಬ್ಬಾಳಿಕೆಯ ಪ್ರತಿನಿಧಿಯಾದರೆ, ಸಿಂಹ ಪ್ರಾಕೃತಿಕ ಕ್ರೌರ್ಯ, ಭಯಾನಕತೆಯ ಪ್ರತೀಕವಾಗಿದೆ. ನಾಗರಿಕ ಪರಿಸರದ ದುಷ್ಟಶಕ್ತಿಗಳು ಕಚ್ಚಾಡುತ್ತಲೆ ನಿರ್ನಾಮವಾಗುತ್ತವೆಂಬ ಕಾವ್ಯನ್ಯಾಯ (poetic justice) ವನ್ನು ಪ್ರಸೇನನ ಮತ್ತು ಸಿಂಹದ ಸಾವಿನಲ್ಲಿ ಕಾಣುತ್ತೇವೆ. ಕೃಷ್ಣ-ಜಾಂಬವರ ಸಮರ ಮತ್ತು ಸಾಮರಸ್ಯ ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ, ಅದೆ ಕಾವ್ಯನ್ಯಾಯವನ್ನು ಇನ್ನೊಂದು ಬಗೆಯಲ್ಲಿ ಎತ್ತಿ ಹಿಡಿಯುತ್ತವೆ. ಜನಪದ ನಾಯಕ ಕೃಷ್ಣ ಮತ್ತು ಕಾಡಿನಲ್ಲಿ ಶಾಂತಿಪ್ರಿಯ ಸಾಂಸಾರಿಕ ಜೀವನ ಸಾಗಿಸುತ್ತಿರುವ ಜಾಂಬವ ಇಬ್ಬರೂ ನಾಡು ಕಾಡುಗಳ ಸೌಮ್ಯವಾದದ, ಸುವರ್ಣ ಮಾಧ್ಯಮದ ಪ್ರತಿನಿಧಿಗಳು. ಇವರ ಸಮರ ಕೂಡ ಗಂಧದ ಜೊತೆ ಗುದ್ದಾಡಿದಂತೆ. ಸಂಘರ್ಷದ ನಂತರ ಇವರು ವಿವೇಕ ಸಹಬಾಳ್ವೆ ಸಾಮರಸ್ಯ ನಿಜಭಕ್ತಿ ಇವುಗಳನ್ನು ಎತ್ತಿಹಿಡಿಯುತ್ತಾರೆ. ದೇವರ ಭಕ್ತನ ಅಳಿಯನಾಗುವ ಒಡಂಬಡಿಕೆ ಸಾಮಾನ್ಯದ್ದಲ್ಲ. ಜಾಂಬವತಿ ಸೌಹಾರ್ದದ ದೇವತೆಯೂ ಇಡೀ ಕಥನಕಾವ್ಯದ ನಾಯಕಿಯೂ ಆಗಿ ನಿಲ್ಲುತ್ತಾಳೆ. ಅವಳ ಹೃದಯ ಪ್ರೀತಿಯಿಂದ ಕೃಷ್ಣನನ್ನು ಕರೆದದ್ದಕ್ಕೇ ಇಷ್ಟೆಲ್ಲ ಕತೆ ನಡೆದು ದುರಂತ ದಾಟಿ ಸುಖಾಂತಕ್ಕೆ ಕಾಲಿಟ್ಟಿತು ಬದುಕು.

೫

ಪಾರ್ತಿ ಸುಬ್ಬ ಕವಿಯ ಮುದ್ರಿತ ಪ್ರಸಂಗಗಳ ಮಾದರಿ ಆಕೃತಿಯಲ್ಲೆ ಈ 'ಜಾಂಬವತಿ ಕಲ್ಯಾಣ'ವೂ ಅಚ್ಚಾಗಿದೆ. ಅಡಿಟಿಪ್ಪಣಿಗಳನ್ನು, ಡಾ. ಎಲ್. ಬಸವರಾಜು ಅವರು 'ಅಲ್ಲಮನ ವಚನಗಳು', 'ಅಕ್ಕನ ವಚನಗಳು' ಕೃತಿಗಳನ್ನು ಸಂಪಾದಿಸುವಾಗ ಬಳಸಿರುವ ಪದ್ಧತಿಯನ್ನು ಮಾದರಿಯಾಗಿಟ್ಟುಕೊಂಡು ನೀಡಿದ್ದೇನೆ. ಅಡಿ ಟಿಪ್ಪಣಿಗಳಲ್ಲಿ ಬಳಸಿರುವ ಸಂಕೇತಾಕ್ಷರಗಳ ಪೂರ್ಣಾರ್ಥ ಹೀಗಿದೆ: ಪಾ=ಪಾಠಾಂತರ (ಅಮ್ಮ ಹಾಡುವುದಕ್ಕೂ, ಅವಳು ಬರೆಸಿಟ್ಟ ಹಸ್ತಪ್ರತಿಗೂ, ನಮ್ಮ ದೊಡ್ಡಮ್ಮ ಹಾಡುವುದಕ್ಕೂ ನಡುವಿನ ವ್ಯತ್ಯಾಸಗಳು) ; ಕ.ರಾ.ಪಾ=ಕಲ್ಲಾಪುರದ ರಾಘವೇಂದ್ರಾಚಾರ್ರು ಧ್ವನಿಮುದ್ರಿಸಿಕೊಟ್ಟಾಗ ಆದ ಪಾಠಾಂತರಗಳು ; ಕಿ.ಕೋ=ಸದರಿ ಪದಕ್ಕೆ ಕಿಟ್ಟೆಲ್ ಕೋಶದಲ್ಲಿರುವ ಅರ್ಥ ; ?=ಹೀಗೆ ಇದ್ದೀತೆ ಎಂಬ ಅನುಮಾನ/ಹೀಗೂ ಇರಬಹುದು ಎಂಬ ನಮ್ರ ತಿದ್ದುಪಡಿ.

ಈ ಯಕ್ಷಗಾನ ಕೃತಿಯನ್ನು ಪ್ರಕಟಣೆಗಾಗಿ ಸ್ವೀಕರಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಹಿಂದಿನ ಅಧ್ಯಕ್ಷರಾಗಿದ್ದ ದಿವಂಗತ ಡಾ॥ ಜೀ. ಶಂ. ಪ, ಅದನ್ನು ಪ್ರೀತಿಯಿಂದ ಪ್ರಕಟಿಸುತ್ತಿರುವ ಈಗಿನ ಅಧ್ಯಕ್ಷರಾದ

ಡಾ|| ಎಚ್. ಜಿ. ಲಕ್ಕಪ್ಪಗೌಡರು ಹಾಗು ರಿಜಿಸ್ಟ್ರಾರ್‌ರವರಾದ ಎಂ. ಎಸ್. ಸಿದ್ದೇಗೌಡರು ; ಇದರ ಬಗ್ಗೆ ಬಹಳ ಆಸಕ್ತಿ ತಾಳಿ ಸಹಕರಿಸಿದ ಗೆಳೆಯ ರಂಗಾರೆಡ್ಡಿ ಕೋಡಿರಾಂಪುರ ಹಾಗು ಹಸ್ತಪ್ರತಿ ತಿದ್ದುವಳಿ, ಕಠಿಣ ಪದಗಳ ಅರ್ಥ ಕೋಶ ತಯಾರಿಕೆಯಲ್ಲಿ ತುಂಬು ಸಹಕಾರ ನೀಡಿದ ಬಿ. ಜಿ. ಚನ್ನೇಶ್ : ಅಂದವಾಗಿ ಮುದ್ರಿಸಿದ ಮುದ್ರಕ ಬಂಧುಗಳು ಇವರೆಲ್ಲರಿಗೂ ಅಭಾರಿಯಾಗಿದ್ದೇನೆ.

'ಅನಿಮಿಷ'
ದುರ್ಗಿಗುಡಿ,
ಹೊನ್ನಾಳಿ–೫೭೭೨೧೭
ಶಿವಮೊಗ್ಗ ಜಿಲ್ಲೆ

ಬಿದರಹಳ್ಳಿ ನರಸಿಂಹಮೂರ್ತಿ
ದೀಪಾವಳಿ-೧೯೯೬

# ಶ್ರೀ ಜಾಂಬವತೀ ಕಲ್ಯಾಣ

## ಪ್ರಥಮ ಸಂಧಿ

### ಶಾರ್ದೂಲ ವಿಕ್ರೀಡಿತ ವೃತ್ತ

ಶ್ರೀಕೃಷ್ಣಂ ಕಮಲಾಸನಾದಿ ವಿನುತಂ ಶ್ರೀರುಕ್ಮಿಣೀಸೇವಿತಂ
ಶ್ರೀವತ್ಸಾದಿ ವಿಭೂಷಿತಂ ಸುವಸನಂ ಶ್ರೀಶಂಖ ಚಕ್ರಾನ್ವಿತಂ ।
ಶ್ರೀಮತ್ಸ್ಯಾದಿ ಗದಾಯುಧಾದಿ ಭರಿತಂ ಶ್ರೀಕೌಸ್ತುಭಾಲಂಕೃತಂ
ವಂದೇ ಸದ್ವನಮಾಲನಂ ಯದುಪತಿಂ ಗೋಪಾಂಗನಾರಾಜಿತಂ ॥

### ನಾಟೀರಾಗ-ಝಂಪೇತಾಳ

ಗಜರಾಜ ನಿಭವದನ ಸುಜನ ಜೀವನ ಜನನ ಭುಜಗಪತಿ ಪರಿಧಾಮ
ನಿಜವೆನುತ ಶರಣು । ಅಜಭವಾಮರ ಕರುಣ ತ್ರಿಜಗವಂದಿತ ಚರಣ
ರಜನಿಚರಕುಲಹರಣ ಜಯತು ಗುಣಸದನೆ ಜಯತು ಜಯತು ॥ ೧ ॥
ಅಂತರಾಯುಗಳಿಲ್ಲದಂತೆ ನುಡಿಯೊಡಿಸಯ್ಯ ಗ್ರಂಥಕೃಪೆ
ಯಲಿ ಲಕ್ಷ್ಮೀಕಾಂತ ನೀಯೆನಗೆ । ಸಂತಸದಿ ನಿನ್ನ ಪದ ಚಿಂತಿ
ಸುವೆ ದೇವಾ ಜಯತು ಜಯತು ॥೨॥ ಕೋಶಪದ ಲಿಂಗಾನುಶಾಸನವ ಕಲಿತಿಲ್ಲ
ಭಾಷೆಗಳ ವಿನ್ಯಾಸ ಲೇಶ ತಿಳಿದಿಲ್ಲ । ಶ್ರೀಶ ಜಯ ವೆಂಕಟನೆ
ತೋಷದಲಿ ಸರ್ವ ವ್ಯತ್ಯಾಸ ಪಾಲಿಸೊ ಎನ್ನ ದೋಷಗಳನೆಲ್ಲ ॥
ಜಯತು ಜಯತು ॥ ೩ ॥

### ದ್ವಿಪದಿ

ಶಾರದೆಯ ಪರಚರಣ ನೀರಜವ ಬೀಳ್ವೊ । ಗೌರೀಶ ಮುಖದಿ
ಪರಿವಾರವನೆ ಕೇಳ್ವೊ ॥ ದಶಮತಿಯ ಪಾದಯುಗ ಬಿಸುಜವನೆ
ನೆನೆದು । ಅಸಮಗುಣ ಜಯರಾಯರ್ಪ್ರಸನದಲಿ ಮಣಿದು ॥
ಗುರುವಾದಿರಾಜರಡಿಗೆರಗಿ ಭಕ್ತಿಯಲಿ । ಪರಮ ಮಂತ್ರಾಲಯೀಶ
ರಿಗೆ ನಮಿಸುತಲಿ ॥ ಶ್ರೀನಿವಾಸಾರ್ಯಗುರು ಮಾನವೋತ್ತಮರ ।
ಧ್ಯಾನಿಸುತ ಕೇಳ್ವೆ ಸುಜ್ಞಾನ ಮತ್ತವರ ॥ ಅರಿಯೆ ನಾ ವರ
ಕವಿತದೊಳಗೆ ಚಾತುರ್ಯ । ಜರಿಯದಲೆ ಕೇಳುವುದು ಬುಧರು
ಹರಿಚರ್ಯ ॥ ಯೋಗಿವರ ಶುಕಪರೀಕ್ಷಿತಗೆ ಪೇಳಿರುವ । ಆಗ

ಮಾಧಿಕ ಭಾಗವತದಿ ಮೆರೆದಿರುವ ॥ ಹರಿಯು ಸತ್ರಾಜಿತನ
ಕುವರಿಗರಸಾದ । ಪರಿಯು ಪೇಳುವೆ ಕೇಳಿ ಕಥೆಗಳ್ಹಿಂದಾದ ॥
ಈ ಪರಮ ಮಹಿಮೆಗಳ ಕೇಳ್ದ ಮಾನವಗೆ । ವ್ಯಾಪಿಸದೆ
ಪೋಪುದಪವಾದ ಲೇಪವಗೆ ॥

## ಸೌರಾಷ್ಟ್ರರಾಗ–ತ್ರಿವುಡೆತಾಳ

ಬಾದರಾಯಣಗೆರಗಿ ವಿನಯದಿ । ಮೇದಿನೀಪತಿ ವರಪರೀಕ್ಷಿತ ।
ಸಾದರದಿ ಬೆಸಗೊಂಡನೀಪರಿ । ಮೋದದಿಂದಾ ॥ ಆ ಸ್ಯಮಂತಕ
ನ್ಯವದಿ ಮೃಗಪತಿ । ನಾಶಮಾಡಿದನೆನಿತು ನೃಪತಿಯು । ಕೇಸ
ರಿಯ ಜಾಂಬವನು ಕೊಂದಿಹ । ಘೋಸವನಿತು ॥ ಸತ್ರಜಿತ
ಕುವರಿಯನು ಶ್ರೀಹರಿ ರತ್ನನೆವದೊಳಗೊಯ್ದು ಕಥೆಯನು
ವಿಸ್ತರಿಸಿ ಪೇಳೆಂದು ಮಣಿದನು । ಪೃಥ್ವಿಪಾಲ ॥

## ಭಾಮಿನಿ

ಈಪರಿಯೊಳಾಲ್ಪರಿದು ಭಕ್ತಿಯೊಳಾಪರೀಕ್ಷಿತ ನುಡಿದ ವಚನವ
ತಾ ಪರೀಕ್ಷಿಸಿ ಪರಮ ಕರುಣಾಟೋಪದಲಿ ಮುನಿಯು । ಶ್ರೀ
ಪತಿಗೆ ನಮಿಸುತಲೆ ಭವಸಂತಾಪ ಕಳೆಯುವ ಪರಮ ಕಥೆಗಳ ನೀ
ಪರಿಯ ಪೇಳುವೆನು ತೋಷದಿ ಭೂಪಕೇಳೆಂದ ॥

## ಕಾಂಭೋಧಿರಾಗ–ಝಂಪೆತಾಳ

ಪಾರ್ಥ ಪೌತ್ರನೆ ಕೇಳು ಪೃಥ್ವಿಯೊಳು ಯದುಪುರದಿ । ಸತ್ರಾ
ಜಿತನೆಂಬೊ ನೃಪನು ॥ ಮಿತ್ರಪದವನು ಭಜಿಸಿ ರತ್ನಪಡೆದಿಹನಯ್ಯ
ಚಿತ್ರವೇನೆಂಬೆ ಕೇಳಿದನು ॥ ಸೃಷ್ಟೀಶಾ ದಿನಮಣಿಯು ಕೊಟ್ಟಾ
ರತುನವ ಮನೆಯೊಳಿಟ್ಟೊ ಪೂಜಿಸುವೋದಿನದಿನದೀ । ಅಷ್ಟ
ಭಾರದ ಕನಕವೃಷ್ಟಿಯನೆ ಕರೆಯುವುದು ಇಷ್ಟಾರ್ಥವೇನದರಮುಂದೆ
ಒಂದು ದಿನದಲಿ ಮಣಿಯ ಕಂದರದಿ ಬಂಧಿಸುತ ಬಂಡ ದ್ವಾರಕಿಯ
ಬೀದಿಯಲಿ । ಇಂದಿರೇಶನ ಚರಣ ಸಂದರ್ಶನಕೆ ಲೋಕಬಾಂಧವನೆ
ಬರುವ ತೆರನಂದು ॥ ಬಲದಲ್ಲಿ ಬಲರಾಮ ವಸುದೇವರೊಪ್ಪಿಸಲು
ಲಲನೆ ಶ್ರೀಭೂಮಿದೇವಿಯರು । ಲಲಿತ ಸಿಂಹಾಸನದ ಮಧ್ಯದಲಿ
ರಂಜಿಸುವ ಜಲಜನಾಭನ ಮೂರ್ತಿ ಕಂಡಾ ॥

## ಭಾಮಿನಿ

ರೂಢಿಪಾಲನೆ ಕೇಳು ರಾಜನ ನೋಡಿ ಯಾದವರೆಲ್ಲ ಮಾಧವ
ಗಾಡುವರು ಯದುಪುರದಿ ಸೂರ್ಯನೇ ಮೂಡಿಬರುತಿಹನು ।
ಗಾಢನೀಕ್ಷಿಸು ಎನಲು ಶ್ರೀಹರಿ ನೋಡಿನರಪತಿ ಕಂಠರತ್ನವ ಮೂಢ
ಮತಿಗಳೆ ಕೇಳಿರೆನ್ನುತ ನುಡಿದ ನಸುನಗುತ ॥

## ಕಾಂಬೋಧಿರಾಗ–ಝಂಪೆತಾಳ

ಇಂದಿರೇಶನು ನೃಪತಿ ಕಂಠದವ ತಾನೋಡಿ ಮಂದಹಾಸವ ಮಾಡಿ
ನುಡಿದಾ । ಅಂಧಕಾರವನಳಿವ ಒಂದು ರತ್ನವ ರಾಜ ಕಂಧರದಿ ಧರಿಸಿ
ಬರುತಿರುವಾ ॥ ನಿತ್ಯದಲಿ ತಪಗೈದು ಭಕ್ತಿಯಿಂದಲೆ ರವಿಯ
ತೃಪ್ತಿಪಡಿಸಿಹನಯ್ಯ ರಾಯ । ಸಪ್ತಾಶ್ವನವಗೆ ನವರತ್ನನಿತ್ತಿಹ
ನವನ ಮತ್ತೇನ ಪೇಳ್ವೆನಾಶ್ಚರ್ಯ ॥ ಏಸು ಜನ್ಮದ ಸುಕೃತ
ಲೇಶದಿಂದಲೆ ರಾಜ ಈ ಸ್ಯಮಂತಕ ಪಡೆದ ನೋಡೀ । ಆ ಶೇಷ
ಮುಖರ ಸುರಭೀಶರಿಗೆ ವಶವಲ್ಲ ಆಸೆ ನಿಮಗ್ಯಾಕೆ ದಯಮಾಡಿ ॥

## ಭಾಮಿನಿ

ಮಾನವಾಧಿಪ ಕೇಳು ಕೃಷ್ಣನು ದೀನಜನ ಮಂದಾರನಾಗಿರೆ ತಾನೆ
ರತ್ನವ ಬಯಸಿ ರಾಯನಕರೆದು ಕೇಳಿದನು । ದಾನವಾಂತಕ
ಭುವನದೊಳಗಾಖ್ಯಾನದೋರಲು ಭಾನು ರತ್ನವ ಧ್ಯಾನಿಸುತ
ವಿನಯದಲಿ ಕೇಳಿದನು ಶ್ರೀನಿಕೇತನನು ॥

## ದ್ವಿಪದಿ

ಕೇಳಯ್ಯ ಸತ್ರಾಜಿತ ಬಾಲ ಶ್ರೀಮಂತ ಪೇಳುವೆನು ಮನದಾಸೆ
ಭೂಲಲನೆ ಕಾಂತ ॥ಪ॥ ಆಸೆಯೆನಗಿಹುದಯ್ಯ ಈ ಸ್ಯಮಂತ
ಕದಿ ದೂಷಿಸದೆ ನೀನಿತ್ತು ತೋಷಿಸೈ ಮುದದಿ । ವಾಸುದೇವನ
ನುಡಿಯ ವಸುಧೀಶ ಕೇಳಿ ಬ್ಯಾಸರದೆ ಪೇಳ್ದ ವಿಶ್ವಾಸವನು ತಾಳಿ ॥
ವಸುದೇವ ನಿನ್ನಪಿತ ವಸುಧೆಯೊಳು ಕೃಷ್ಣ ಬಿಸಜಾಕ್ಷ ನಿನಗ್ಯಾಕೆ
ಪೊಸಮಣಿಯು ಕೃಷ್ಣಾ । ಇನಿತು ಪೇಳುತರಾಜ ಪಿಸುತೆಸುತ
ರಥಗೆ ಪ್ರಣತನಾಗುತೆ ನಡೆದ ಘನತೆಯಲಿ ಮನೆಗೆ ॥

### ಭಾಮಿನಿ

ಕೇಳು ಪಾಂಡವ ಪೌತ್ರ ಕೃಷ್ಣಗೆ ಪೇಳಿ ಸಮ್ಮತವ ಜನ ಧೈರ್ಯವ
ತಾಳದಲೆ ಚಿಂತಿಸುತ ಪೃಥ್ವೀಪಾಲ ತಾನಿಂತು । ಏಳು ಲೋಕದಿ
ಕೃಷ್ಣನಿದಿರೊಳು ಬೀಳುವರ ನಾಕಾಣೆ ಈ ಮಣಿಯ ಮೂಲದಲಿ
ಬಲ್ಲಿದರ ದ್ವೇಷ ದೊರಕಿಹುದು ॥

### ಸೌರಾಷ್ಟ್ರರಾಗ

ಆದರೇನಾಗುವುದು ಕೃಷ್ಣನ ಬಾಧೆಗಳು ನಮಗೇನು ಎನ್ನುತ
ಸೋದರನ ಕಂದರದೊಳಿಟ್ಟನು ಮೋದದಿಂದಾ ॥

### ಭಾಮಿನೀ

ಮಾನವಾಧಿಪ ಕೇಳು ರಾಜನು ಭಾನು ರತ್ನವ ನೀಯಲದನು
ಸಾನುರಾಗದಿಗೊರಳಿಗಡವಡಿಸಿ ಪ್ರಸೇನನಿರಲಿತ್ತಲು । ಕಾನನದಿ
ಚರರೈತಂದು ಬೇಗದಿ ತನಿವಣ್ಣಗಳಂ ಕಾಣಿಕೆಯಿತ್ತು ಮಾನನಿಧಿಯನು
ಕಾಣುತಲೆ ಬಿನ್ನೈಸಿದರು ಬಂದ ಪರಿಯ ॥

### ಏಕತಾಳ

ಲಾಲಿಸಬೇಕೊ ಜೀಯ ಪ್ರಸೇನರಾಯಾ ಲಾಲಿಸಬೇಕೊ ಜೀಯ
॥ಪಲ್ಲವಿ॥ ಪುರದ ಬಾಹ್ಯದೊಳಿರುವ ವರವನದೊಳಗೆ ಸರ್ವ
ಕರಡಿ ಹುಲಿಯು ಸಿಂಹ ಬಲು ಇರುವೊದದ್ಯೋ[೧] ॥ ಕಾಡಿನೋಳ್ ಬರುವೊ
ಜನರ ಪೀಡಿಸಿ ಬಡಿಯುತ್ತವರ ಕೇಡು ಮಾಡುವೊ ವಿವರ
ಮಾಡೇಳೊ ಸಮರಾ ॥ ಲಾಲಿಸಬೇಕೊಜೀಯ ॥

### ಸೌರಾಷ್ಟ್ರರಾಗ-ತ್ರಿಹುಡೆ

ಕೇಳಿ ಮನದೊಳು ತಾಳಿ ಹರಷವ ಪೇಳಿದನು ಪರಿವಾರ ಸಹಿತಲೆ
ಏಳಿ ನೀವೆಂದೆನುತ ಚರರನು ಬೀಳುಗೊಳಿಸಿದನು ॥ ಅಗ್ರಭವನಡಿಗೆರಗಿ
ವಿನಯದಿ ಉಗ್ರಧನುಶರ ಕೊಂಡು ಪೊರಟನು ಅಗ್ರಸಾಹಸದಿಂದ
ಪ್ಪರುಷ ಸಮಗ್ರತೆಯಲಿ ॥ ಸೇನೆಸಹಿತ ಪ್ರಸೇನರಾಯನು
ಕಾನನವ ಚರಿಸುತ್ತ ಬರುತಿರೆ ಕಾಣುತಲೆ ಪಾಂಚಾನನವನು ಮನ
ಬೆದರಿ ಚರರು ॥ ಓಡಿದರು ನಾಲ್ದೆಸೆಯಲೆಲ್ಲರು ಕಾಡಿನಲಿ ಹರಿ
ನೋಡಿ ರಾಯನ ಒಡಲ ಬಗೆದು ಈಡ್ಯಾಡಿ ಮಣಿಯನು ಪಿಡಿದು
ನಡೆಯೆ । ಕೊಂದಿತಾ ವನದೊಳಗೆ ಮೃಗರಾಜೇಂದ್ರನನು ಜನ
ತುರುಗಸಹಿತಲೇ ಬಂದು ಜಾಂಬವನೊಂದು ಸಿಂಹವ ತಂದು[೨] ಮನದಿ ॥

---

೧. ಬಲು ಐತೆ ವಹವ್ವಾ-ಕ.ರ್.ಪಾ. ೨. ಕಂಡು-ಕ.ರಾ.ಪ.

### ಭಾಮಿನೀ

ಅಮಮ ಸಿಂಹದ ಕೊರಳ ಮಣಿಯನು ಮನನವಾಗಲಿ ಕಳವಲ್ಲ
ಭುವನದೊಳಗಿಹ ದೇವ ಮಾನವರೊಳು । ದ್ಯುಮಣಿ ಕೋಟಿ
ಪ್ರಕಾಶವೆಸೆವುದೀ ಮಣಿಯ ಮೂಲವರಿಯದೆ ಭುವನಕಿದನೊಯ್ವೆ
ನೆಂದನು ವನಜನಾಹವಕೆ ॥

### ಮಟ್ಟು

ನಿಲ್ಲು ನಿಲ್ಲು ಎಲ್ಲಿಗೊಯ್ವೆ ಚೆಲ್ವ ಮಣಿಯನು ಸಲ್ಲದೀಗ
ನಿನ್ನ ಬಲುಹೆ ಖುಲ್ಲ ಸಿಂಹವೆ । ಕಳ್ಳತನವಿದೊಳ್ಳಿತಲ್ಲ ಬಳ್ಳು
ಕಾಗೆಗಳಿಗೆ ನಿನ್ನ ಚೆಲ್ಲಿ ಕೊಡುವೆ ಒಳ್ಳೆಮಾತಿನಲ್ಲಿ ಕೊಡದಿರೆ ।
ಎಂದ ಮಾತಿಗಂದು ಹರಿಯು ಬಂದು ನಖದಲಿ ಮುಂದುವರಿದು
ಬಡಿಯಲದರ ಕೊಂದು ಮಣಿಯನು । ತಂದು ಬಿಲದೊಳಿರುವ
ಸದನಕಂಬುಬಂಧಿಸೆ ಆನಂದದೋಳು ನಿತ್ಯದಲ್ಲಿ ಕುಂದದಿತ್ತಲು ।
ಒಂದು ದಿನವು[೧] ಬನದಿ ರಾಜನಂದು ಆರಸಿ ಕಾಣದಿರಲು ನೊಂದು
ಮನದಿ ಮಂದಿರಕ್ಕೆತಂದು ನುಡಿದರು । ತತ್ತರಿಸಿ ನುಡಿಯ
ತೊದಲುತ್ತ ನುಡಿದರು ಅತ್ತಹರಿಯ ಕಂಡು ಬೆದರುತ್ತ ಪೋದೆವು ।
ಮತ್ತೆ ವನದಿ ಅರಸೆ ರಾಜನೆತ್ತಪೋದನೊ ಗೊತ್ತು ಆಗದೆನುತ
ಮರುಗುತ್ತ ನುಡಿದರು ॥

### ಸೌರಾಷ್ಟ್ರರಾಗ-ತ್ರಿಹುಡೆ

ಪೃಥ್ವೀಪತಿ ಕೇಳಿಂತು ವನದಲಿ ಮೃತ್ಯುವಶನಾಗಿರುವ ತಮ್ಮನ
ಸತ್ರಾಜಿತನರಿಯದಲೆ ನೆನೆದನು ಚಿತ್ತದೊಳಗೆ । ಎತ್ತಪೋದ
ಪ್ರಸೇನರಾಯನು ಚಿತ್ತಪಲ್ಲಟವಾಗಿ ಮನ ಮರುಗುತ್ತ ನುಡಿದನು
ಮಿತ್ರ ಬಾಂಧವ ಭೃತ್ಯರಿಂಗೆ ॥

### ಭೈರವಿರಾಗ-ಮಟ್ಟು

ಎಂದಿಗೆ ಕಾಂಬೆನೊ ತಮ್ಮನ ಸುಂದರ ಮುಖಕಮಲವನು ॥ಪಲ್ಲವಿ॥
ಚೆಂದದಿ ಮೃಗವನು ಬೇಟೆಗಳಿಂದಲಿ ಬರುವುದನು ॥ ಅಡವೀಯೊಳ
ಗಾಡುವೂ ಮೃಗಗಳು ತಡೆದವೊ ನಡೆ ಕೆಡಿಸಿದವೋ ದೃಢತರನಖಪಲ್ಗಳ
ಸಂಗಡಣದಿ ಮಡಿಸಿದವೋ ॥ ಜೀವದೊಳಗಿರುವನೊ ಮಾನುಷ
ಭಾವವನೀಗಿಹನೊ ಈ ವಿಧಗಳು ತಿಳಿಯವು ಮಹದೇವನೆ ಬಲ್ಲವನೊ ॥
ಸಂತತ ಚಿಂತಿಪಹರಿ ಸ್ಯಮಂತಕ ಮಣಿಲೋಭದಲಿ ಅಂತಕನಾಗಿರುವನು

೧. ಪಾದ-ಕ.ರಾ.ಪ. ೨. ಬಂದು ಬಲವು-ಕ.ರಾ.ಪ.

ಭೂಕಾಂತಗೆ ವನದಲ್ಲಿ ॥ ಅಚ್ಯುತನಿಂದಲಿ ರಾಯನು ನಿಶ್ಚಯ
ಮೃತವಾಗಿಹನು ಮತ್ಸರವಿಟ್ಟಿಹನವನಾ ಮೆಚ್ಚುವುದ್ಯಾಂಗಿನ್ನು ॥

ಭಾಮಿನೀ

ಇಂದು ವಂಶಾಧಿಪನೆ ಕೇಳರವಿಂದನಾಭನು ವನದಿ ರಾಯನ ಕೊಂದು
ರತ್ನವ ತಂದನೆಂಬುವ ನಿಂದೆ ಮಾತುಗಳು । ಹಿಂದೆ ಮಾಡಿದ ಚೋರ
ತನವನು ಮುಂದೆ ಮರೆಯನು ಕೃಷ್ಣ ನಿಶ್ಚಯವೆಂದ ನುಡಿಗಳ
ಕೇಳಿ ವಿಧಿಸುತ ಬಂದು ಹರಿಗೆಂದ ॥

ರಾಗ-ತಾಳ

ಏನಯ್ಯಾ ಯದುರಾಯ ಧಾರಿಣಿಯ ವಾರ್ತೆಗಳು ದಾನವಾಂತಕ
ಪೇಳೋ ಯೆನಗೆ । ನೀನಾಳ್ವೋ ದೇಶದೊಳು ಭೂನಾಥಾದಿ
ಗಳೆಲ್ಲ ಪ್ರಾಣ ಮಾನದಿ ಸುಖವೇನಯ್ಯಾ ॥ ಆ ವಿಧಿತನಯಂಗೆ
ಭಾವಜಪಿತ ನಮಿಸಿ ದೇವಋಷಿ ನಿಮ್ಮಾ ದಯದಿಂದ । ದಾವ ದುಃಖ
ಗಳಿಲ್ಲದೆ ದೇವಲೋಕಗಳಂತೆ ಭುವನದೊಳೂ ಸೌಖ್ಯವೆಂದ ॥
ಸತ್ರಾಜಿತನಿಗೆ ತೋಷದಿ ಮಿತ್ರತಾನೊಲಿದಿತ್ತ ರತ್ನವ ಧರಿಸಿ
ಕಂಠದಲಿ । ಪೃಥ್ವೀಶನನುಜಾನು ಎತ್ತಿರಲು ವನಬೇಟೆ ಮೃತ್ಯುವಿನಾ
ವಶನಾದನಂತೆ ॥ ಧಾತಾಸಂಭವ ಕೇಳೊ ಕೌತುಕವೇನಿದು ಭೂತ
ಳಾಧಿಪನ ಘಾತಿಸಿದ ಪಾತಕಿ ಖಳನಾರೊ । ಈ ಕ್ಷಣದಲಿ ತಿಳಿದವನದಃ
ಪಾತಗೈವೆನೆಂದ ಹರಿಯು ॥ ನೀನೇಮಣಿಲೋಭದಲಿ ಕಾನನದೊಳು
ಸುಪ್ರಸೇನರಾಯನ ಕೊಂದನೆಂದು । ಈ ನಾಡಿನ ಜನರೆಲ್ಲ
ಮನದೀ ನುಡಿವರು ದಾನವಾರಿಯೊಳಿಂತೆಂದಾ ಮುನಿಯು ॥

ಭಾಮಿನೀ

ನಾರದನ ನುಡಿ ಕೇಳಿ ಮನದೊಳಪಾರ ಶೋಕವ ತಾಳಿಮರುಗಿದ
ಪಾರಮೇಷ್ಠ್ಯಂಬು ಕೇಳು ನಿಜಜನ ವೈರವೆಸಗುವೆನೆ । ವೀರ ಎನ್ನಯ
ಗುಣವನರಿಯದೆ ದೂರಿದನೆ ಜಗದೊಳು ಸುಮ್ಮನೆ ದಾರಿಮುಂದೇ
ನೆಂದು ಚಿಂತಿಸುತಿರ್ದನಾ ಶೌರಿ ॥

ರಾಗ-ಆದಿತಾಳ

ಮಂತ್ರಿ ಕೇಳಪ್ಪಾ ಕೃತವರ್ಮ ಚಿಂತಪಕೀರ್ತಿ ಎಂತಿಹುದೆನ್ನ
ದುಷ್ಕರ್ಮ । ಚಿಂತಿಸಲದರ ಮರ್ಮ ತಿಳಿಯುವುದಿಲ್ಲ । ಅಂತೆ

ಅದರ ಸದ್ಧರ್ಮ । ಸತ್ರಾಜಿತನ ತಮ್ಮನ ವನದೊಳು ಕೊಂದೂ
ರತ್ನವ ತಂದೇನಾನವನ । ಸತ್ಯವೆನುತ ಜಗದೊಳು ಪೃಥ್ವೀಶ ಎನ್ನ
ಜನರೊಳು । ನಿತ್ಯದೂರುವ ನೀಕೇಳು ॥ ಹಿಂದೇ ನಾ ಮಣಿ
ಲೋಭಕ್ಕೆ ಎಂದಿಗೆ ನೃಪನ ಕೊಂದೆನಂತೆಂದು ಜನಕೆ ಸಂದೇಹ
ತೋರುವುದ್ದೀಗೆ । ಇಂದಿನದೊಳು ಮುಂದೆ ಮಾಡುವುದೇನೀ
ಗ್ಹೇಳು ॥ ಮಾಡಲೇನಿದಕೆತ್ನವ ಉಡಿಯೊಡ್ಡಿರವಿಯು ಬೇಡಲಿ
ನ್ನೊಂದು ರತ್ನವ । ರೂಢಿಪಾಲನಳಿದಿರುವ ಕಾಂತಾರವನೇ ನೋಡಿ
ಬರುವ ರತ್ನವ । ಶಿಶುಭಾವದಲ್ಲಿ ಗೋಪಿಯರ ಪಾಲ್ಮೊಸರು
ಬೆಣ್ಣೆ ವಿಷವಾಯಿತೆನಗೆ ಕೊನೆಯೊಳು । ವಸುಧೀಶನಾಗಿ ಜಗದೊಳು
ಈ ವಿಷಮವಚನ ಪೊಸತಾಗಿ ಕೇಳ್ವೋದ್ಯಾಗ್ಹೇಳು ॥

## ಭಾಮಿನೀ

ಜನಪ ಜನಮೇಜಯನ ಪಿತನೆ ಕೇಳನುಪಮನು ಮಂತ್ರಿಯೊಳು
ನುಡಿಯುವ ಘನವ್ಯಸನ ವಚನವನು ಕೇಳುತ ತಜ್ಜನಿತ ರೋಷದಲಿ ।
ಘನಪರಾಕ್ರಮವೆತ್ತಲಡಗಿತು ತೃಣಕೆ ಸಮನೆಂದೆನಿಸಿ ಕೃಷ್ಣನ ಮನಕೆ
ಬಂದುದ ನುಡಿದ ಹಲಧರ ಚಪಕದಂಬದಲಿ ॥

## ಕಾಪಿರಾಗ—ಅಷ್ಟತಾಳ

ಕೇಳುತ್ತ ಹರಿಬಳಲಿಕೆಯು ರಾಮ ತಾಳಿ ರೋಷದಿ ನಡುಗಿಸಿದ
ದ್ವಾರಕಿಯ । ಆಲಯದೊಳಗನಾಗಾಲ ನೀಸೇರದೆ ಕೀಳು
ಮಾತನು ಕೇಳಿ ಬಾಳುವುದಾಯ್ತೆ ॥ಪಲ್ಲವಿ॥ ಇಂದು
ವಂಶದಿ ನೀ ಜನಿಸಿ ವ್ರಜಮಂದಿರದಲಿ ಜಾರಚೋರನೆಂದೆನಿಸಿ ।
ಮಂದರಗಿರಿ ಪೋಲ್ವೊ ಕುಂದ ನುಡಿಯು ಕೇಳಿ ಮಂದೀಯೊ
ಳಗೆ ಮಾನವೆಂದಿಗೆ ಬಾಹುದೊ ॥ ನೋಡಿ ನಿನ್ನವಗುಣಗಳನು
ಜನರಾಡದೆ ಬಿಡುವರೆ ಮಾಡುವುದೇನು । ರೂಢಿಯೊಳಗೆ ನಗಾಡಲಿ
ಬಾರದೆ ಜೋಡಿನವರೆಲ್ಲ ನೋಡುತ್ತ ನಗುವರೊ ॥ ನಿಂದಿರ
ಬೇಡೊ ಎನ ಮುಂದೆ ತ್ವರೆಯಿಂದ ಪ್ರಸೇನರಾಯನ ದಾರಿ
ಹಿಂದೆ । ಒಂದುಳಿಯದೆ ಗಿರಿಕಂದರಗಳನ್ನೆಲ್ಲ ಛಂದಾಗಿ ನೋಡಿ
ಬಾರೆಂದನು ಇಂದಿರೇಶಗೆ ಬಲರಾಮ ॥ ಎಂದಿಗಾದರು ರತ್ನರಾಜ
ರೊಳು ಒಂದಾರು ನೀತರದೆ ಬಂದರೆ ಭೋಜಮಂದಿರದೊಳಗೆ
ಹೊಂದಿಸಗೊಡೆ ನಾನು ಸಂದೇಹಬ್ಯಾಡ ಹೋಗೆಂದ ಇಂದಿರೇಶಗೆ
ಬಲರಾಮ ॥

## ಕಾಂಬೋಧಿರಾಗ—ಝಂಪೆತಾಳ

ಕೇಳಿ ಕೃತವರ್ಮ ಮಾಧವಗೆ ಬಲನಾಡಿದನ ತಾಳಿ ರೋಷದಿಪೇಳ್ದ ನಿಂತು ಕಾಲವಶದೊಳು ಕಾಕತಾಳನ್ಯಾಯದಿ ಬಂದ ಕೀಳುಮಾತಿಗೆ ಮಾಳ್ಪುದೇನು । ಎಂದ ನುಡಿಕೇಳಿ ಬಲನೆಂದ ಮಂತ್ರಿಗೆ ನೃಪನ ಕೊಂದು ತಂದಿಹನ್ಯಾರೊ ರತುನ । ಬಂದಿಹುದು ಚೋರತ್ವ ಸಂದೇಹ ಎಮ್ಮೊಳಗೆ ಮುಂದೆಮಾಡುವುದೇನೊ ಎತುನ । ಮುರ ಹರನ ಚರಣವನು ನೆರೆನಂಬಿದವರಿಗೆ ದುರಿತಪೊಂದುವುದುಂಟೆ ಜಗದಿ ದುರಳ ಸತ್ರಾಜಿತ[೧] ಬರಿದೆ ದೂರಿದನ್ನರಿಯ ವರಸಿರಾಪಾಣಿ ಕೇಳೆಂದ । ಹಲಧರನು ನುಡಿದವಗೆ ಬಲವ ಶೃಂಗರಿಸಯ್ಯ ಹಲವು ಮಾತಿಂದೇನು ಫಲವೊ । ಕಲಹದೊಳಗೆನಗೆಣೆಯ ಬಲವಂತರ್ಯಾರುಂಟು ತಿಳಿದು ಬರು ವೆನೊ ಮಣಿಯ ಇರವ[೨] ॥ ನೋಡಿ ಬಲನೋಲಗವ ಗೂಢವಾಗಿಹ ತೋಷಮಾಡಿವದನದಿ ನುಡಿದನ್ನರಿಯು । ಕಾಡಡವಿಗಳಪೊಕ್ಕು ನೋಡಬಲ್ಲವರನ್ನು ಗಾಡ ಕರೆಸೈ ಸಚಿವ ಜನರ ॥

## ಶ್ರೀಹಂಡೆ

ಸೇನೆ ಸಹಿತ ಪ್ರಸೇನರಾಯನು ಕಾನನವ ನಡೆತಂದು ತರುಗಿರಿಸಾನು ಗಳ ತಾನೇರಿ ನೋಡಿದ ದಾನವಾರಿ । ಏನೂ ಕಾಣುವುದಿಲ್ಲ ವನ ದೊಳು ಸೇನೆಯನೆ ಮುಂದೇನುಪಾಯಗಳು ಆನನವ ಮುಂತೂಗಿ ಮಾಧವ ಧ್ಯಾನಿಸಿದನು ॥ ಅಹಹ ನೋಡಿಲ್ಲೇನು ಕೌತುಕ ಸಹಿಸ ಲಾಗದು ಶವದಗಂಧವು ಬಹುಮೃಗಾದಿಗಳಿಲ್ಲ ನೆರೆದಿದೆ ವಿಹಗಸಹಿತ ನೋಡಿರೆಂದ । ನೋಡಿದನು ಮಾಧವನು ಮನದೊಳು ರೂಢಿಪನ ಸೋದರನ ದೇಹವ ಕಾಡಿನೊಳು ಮೃಗಬಡಿದು ಕೊಂದಿದೆ ನೋಡಿ ರೆಂದ ॥ ಪರಿಕಿಸಲು ಮೃಗರಾಜನ್ಹೆಜ್ಜೆಯು ದೊರಕಿತಾ ವನ ಭೂಮಿಯೊಳಗನುಸರಿಸಿ ಪೋಗಲು ಕಂಡಮೃತ ಕೇಸರಿಯ ನ್ನರಿಯು ॥

## ಭಾಮಿನೀ

ವರಪರಿಕ್ಷಿತ ಕೇಳು ಮೃತಕೇಸರಿಯ ಕಂಡ್ಮುದದಿಂದನು ಶ್ರೀಹರಿ ನೆರೆದು ನೋಡಿದರಾಗ ಯದುಬಲವೀರರೆಲ್ಲವರೂ । ನರಪ ಸತ್ರಾ ಜಿತನ ತಮ್ಮನ ಮರಣವೀ ಹರಿಯಿಂದ ನಿಶ್ಚಯ ಬರಿದೆದೂರಿದನಲ್ಲ ವೆಂದಾಗೊರದ ಕೃತವರ್ಮ ॥

---

೧. ಸರ—ಪಾ. ೨. ಆ ಮಣಿ ಮರುಗುತ್ತ—ಪಾ.

## ಕಲ್ಯಾಣಿರಾಗೆ

ದೇವ ಲಾಲಿಸಯ್ಯ ಯಾದವ ಕುಲಜೇಯ ಲಾಲಿಸಯ್ಯ ॥ ಪಲ್ಲವಿ ॥
ಈ ವನದೊಳು ಬಿದ್ದ ರಾಯನ ಕೊಂದವ ದೇವನೊ ಮಾನವನೊ
ಯಾದವರಾಯ ॥ ಅನುಪಲ್ಲವಿ ॥ ಸಿಂಹರಾಯನ ಕೊಂದರೂ
ಕೇಸರಿಯನು ಸಂಹರಿಸಿರುವನ್ಯಾರು । ಗಹ್ವರಿಯೊಳು ನೋಡಿ
ತೋರಿಸದಿರೆ ಲೋಕನಿನ್ನವ೧ ತಪ್ಪದಯ್ಯ ಯಾದವರಾಯ ॥
ರಾಜನ ದೇಹದೊಳು ತೋರ್ಪುದು ಮೃಗರಾಜನ ದಂತಗಳು ।
ಭೋಜಾರಿ ನೋಡಯ್ಯ ನಾಗರಿ ಮರಣದ ಬೀಜವ ಪೇಳೋಜೇಯ೨
ಯಾದವರಾಯ॥ ಬಾಣದ ಘಾಯವಲ್ಲ ಕಾಣೂದು೩ ಕೃಪಾಣದ ಘಾಯವಲ್ಲ॥
ಮಾನವಾರಿ ಹರಿಯ ಪ್ರಾಣವ ಕಳೆದಿಲ್ಲ ತಾನಾಗಿ ಮೃತವಾಗಿಲ್ಲ
ಯಾದವರಾಯ ॥

## ಭಾಮಿಂನೀ

ಮಲ್ಲವೈರಿಯು ಮೃಗನದೇಹವನ್ನೆಲ್ಲ ನೋಡುತ ತಿಳಿದನಿದು
ಶರವಲ್ಲ ಶಸ್ತ್ರಗಳಲ್ಲ ಭಲ್ಲೂಕ । ಪಲ್ಲುಗಳ ನೋಡೆಂದು ಮರು
ಗಿದ ನೆಲ್ಲಿರುವನೊ ವನದೊಳಗೆ ಜಾಂಬವ ಎಲ್ಲಿದ್ದರೂ ಬಿಲ ನೋಡಿ
ರೆಂದನು ಕೇಳು ಭೂಪಾಲ ॥

## ಕೇದಾರ ಗೌಳರಾಗ

ಕೇಳಿರಿ ಭಟರಿವನಾಳುವ ಜಾಂಬವನಾಲಯ ವೆಲ್ಲಿವನಾ ಕಾಳಗದಲಿ ಸಿಂಹ
ಕಾಲನೈದಿದನೆಂದು ಪೇಳಿದ ಮಧುಸೂದನ ॥ ಇಂದಿರೇಶನ ಮಾತ
ಲಾಲಿಸಿ ಹಲಧರನೆಂದನು ಶೌರ್ಯದಲಿ ಸಿಂಧುರಾಯನ ವೈರಿ ಮಂದಿರ
ಬಗೆವೆನಿಂತೆಂದನು ಛಲಳದಿಂದಲೆ ॥ ನೋಡುತ್ತ ಭೂಮಿಯೊಳ್
ಮೂಡಿದ ಪೆಜ್ಜೆಗಳ್ ನೋಡಿದರತಿಜವದಿ ಕಾಡಿನೊಳ್ ಜಾಂಬವ
ಮಾಡಿದ ಗವಿಮುಂದೆ ಕೂಡಿದರತಿಜವದಿ । ಆಹಹ ನೋಡಿರಿ ಬಿಲ
ಗಹನವಾಗಿದೆ ಪೋಗಲಿಹನೋರ್ವ ಭಟನಾದರೂ । ಸಹಸದಿ ಪೋದರು
ಬಹುದು ಅಸಾಧ್ಯವೆಂದು ಬಹು ಚಿಂತೆಮಾಡಿದರು । ಬಲೆಯ ಬೀಸಿ
ರಿಸುತ್ತ ಬಲೆಗಾರರೆಂದನು ಕಲಿ ಕೃತವರ್ಮ ತಾನು । ಬಲವಂತ
ರೆಲ್ಲರು ಬಿಲಗಾವಲಾಗಿರಿ ಝಳಪಿಸಿ ಖಡ್ಗಗಳ ॥

೧. ಲೋಕನಿಂದಾವು-ಪಾ. ೨. ಪೇಳ್ವೆನಯ್ಯಾ-ಪಾ. ೩. ತೃಣ-ಪಾ. ೪. ಹಲ-ಪಾ.

### ಭಾಮಿನೀ

ಚಂದ್ರವಂಶೋದ್ಭವನೆ ಕೇಳರವಿಂದ ಲೋಚನ ನುಡಿದನೀ ಬಲ
ಮಂದರಾದ್ರಿಯೊಳೆಲ್ಲು ಕಾಣೆನು ಸಿಂಧುಕುಹರದಲಿ । ಅಂಧಕಾರವ
ನೋಡಿ ಧೈರ್ಯವ ಕುಂದಿನಿಂದರು ರಥಿಕರೆಲ್ಲಲು ಇಂದಿಗೀ ಬಿಲ
ಪೋಪರ್ಯಾರೆಂತೆಂದು ಯೋಚಿಸಿದ ॥

### ಸಾಂಗತ್ಯ

ಏನಾ ಮಾಡಲಿ ನಾನು ಸೇನಾ ನಾಯಕರೆಲ್ಲ ಮೌನಾದಿಂಬಳಲುವು
ದಾಯ್ತು । ಕಾನನದೊಳಗನ್ನ ಪಾನವಿಲ್ಲದೆ ಕಷ್ಟವೆಸಗಿದ್ದೂ
ಫಲವಿಲ್ಲದಾಯ್ತು ॥ ರೊಧೀಪಾಲನ ರತ್ನ ಬೇಡಿದ್ದೂ ಕೇಡಾ
ಯ್ತು ಆಡಿದರೇನು ಫಲವಿನ್ನು । ಮಾಡಿದ್ದ ಕರ್ಮವು ಬೇಡಿಕೊಂ
ಡರು ಬಿಡದು ಕಾಡಿನೊಳ್ ಮರುಗಿದರೇನು ॥ ನನಗಾಗಿ ಕುಲಬಂಧು
ಜನಸಹಜಾದಿಗಳೆಲ್ಲ ತೃಣಗುಲ್ಮಾದಿಗಳ೧ ಸಂಚರಿಸೆ । ದಣಿದರು ಮಗುಳಿನ್ನ೨
ಫಣಲಿಖಿತವೆಂತಿಹುದೊ ಮಣಿಯ ಮೂಲವು ತಿಳಿಯದ್ದೋಯ್ತು ॥

### ಅಷ್ಟತಾಳ

ಸೇನೇಯನೆಂದನೀ ವನದೊಳು ಕಾಲ ತಾನೆ ಬಂದರೆ ಮೋಹರದೊಳು
ನಾನೋರ್ವನೆ ಕೊಲ್ಲುವೆನೆಂದಾ ಕೆಟ್ಟದೀನ ಜಂತುಗಳನ್ನು ಕೊಲ್ವೆ
ನೆಂದಾ । ಉದ್ಧವನೆಂದನು ಜಾಂಬವ ಮಾಡಿದ್ದ ಗವಿಯ ಪೊಕ್ಕು
ಮಾರ್ಗವ ಸದ್ದು ಮಾಡುತ ನೋಡಿರೆಂದ ಬಂದರೊದು೩ ಕೆಡವುವೆ
ನೋಡಿ ಜವದಿಂದ । ಕೃತವರ್ಮನೆಂದ ನಾ ಪೋಗುವೆ ಕೆಟ್ಟಮತಿ
ಜಾಂಬವಂತನ ಕೂಗುವೆ ಪ್ರತಿವಚನವು ಬರದಿದ್ದರೆ ನಾ ಪೋದ ಪಥವ
ಬಿಡದೆ ಹಿಂದೆ ತೆರಳುವೆ ॥ ಅಂದೇಯ೪ಳಿಚಾರಸುಖದೊಳು ಬಹು
ಮಂದಿಯ ನಿದ್ರೆಯ ತೆರದೊಳು ಬಂಧನಗಳು ಬಂದಿತೆನಗೆಂದ
ಬಲನೆಂದ ಮಾತಿಗೆ ಕೃಷ್ಣ ಬಲುನೊಂದ । ಏನು ಸಂಕಟವಿಲ್ಲ
ನಿಮಗೆಂದ ನೋಡಿ ದಾನವಾರಿಯು ಕೆಟ್ಟಗುಣದಿಂದ ತಾನೆ ಪೋಗುವೆ
ಬಿಲ ಸುಖದಿಂದ ರಾಜಧಾನಿಗೆ ನಡೀರೆಂದು ಹರಿಯೆಂದ ॥

### ವಾರ್ಧಿಕ್ಯ

ಪೊಡವೀಶ ಕೇಳು ಬಲ ನುಡಿದ ವಚನಕೆ ಕೋಪವಡದನಚ್ಯುತನಾಗ
ಗಡಬಡಿಸಿ ರಥವಿಳಿದು ತೊಡಕಿದನು ಶಾರ್ಙಶರ೫ ಕಡುಕೋಪದಿಂದಾ ।

---

೧. ಗಳನಿಲ್ಲ–ಪಾ. ೨. ಮರುಳಿನ್ನ–ಪಾ. ೩. ಬಂದೊಂದ್ದು–ಪಾ. ೪. ಅಂದೇನು–ಪಾ.
೫. ಶಾರ್ಙಧರ ?

ಪೊಡವಿನಡುಗಿತು ಹರಿಯ ಜಡಜಪಿಡಿಲಧ್ವನಿಗೆ ಕಡಲುಕ್ಕಿ ಬರಲೆದೆಯು ವಡಲಿತಾ ಧಕ್ಕರಿಸೆ ಕಡೆಗಾಲವೆಂದರು ಮೃಡಲೋಕದಡಿವರೆಗೆ ನಡೆ ತಂದನಾ ಬಿಲದೊಳು ॥

## ಭೈರವಿರಾಗ–ಏಕತಾಳ

ಯಾರೆಲವೋ ಬಿಲದೊಳಗೆ ಮುಖ ತೋರಲು ಬಾರೆನ್ನೊಳಗೆ
ಕಾಲ ಬಂದೆನೊ ನಿಮ್ಮ ಕುಲಕೆ ಎಂದಾಡುತ ನಡೆದ ಸಂಗರಕೆ ॥
ಎಂದಾರ್ಭಟಿಸುತ ಬರಲು ಗೋವಿಂದನ ಕಂಡ್ವದರಿದಳು ಸುಂದರಿಯು ಳು ಜಾಂಬವನ ಮಾನವ ಬಂದವನ್ಯಾರ್ ನೋಡಿವನ ॥ ಎಂದಾಡಿದ ನುಡಿಕೇಳಿ ಜಾಂಬವಬಂದನು ರೋಷವತಾಳಿ ಸುಂದರಾಂಗನ ಮುಖ ನೋಡಿ ನೀನ್ಯಾರೆಂದನು ಘರ್ಜನೆ ಮಾಡಿ ॥

## ಕೇತಾರಗೌಳರಾಗ–ಅಷ್ಟತಾಳ

ಯಾರೋ ನಿನ್ನಯ ಪುರಯಾವದೇಶದೊಳಿದ್ದೆ ಯಾರಿಗೆ ನೀಮಗನೊ ದಾರಿಯ ಬಿಟ್ಟೆಂಥ ಘೋರಡವಿಗೆ ಬಂದ ಕಾರಣವೇ ನೆಂದನು । ಎಂದ ನುಡಿಗೆ ಕೃಷ್ಣನಂದನು ದ್ವಾರಕ ಮಂದಿರಕೇ ಳೆಂಧನು । ಇಂದಿರೇಶನ ಕಳೆಯಿಂದವತರಿಸಿದೆ ನಂದನ ಕಂದ ನಾನು । ಲೋಕದೊಳ್ ಶ್ರೀರಾಮನೇಕನೆ ಪರದೈವ ನಾಕೇಳಿದೆನೊ ಘಾತವ । ಕಾಕುಮನುಜ ನಿನಗ್ಯಾಕಿಂತ ಬಡಿವಾರ ಸಾಕೆಂದನಾ ಜಾಂಬವ । ಮಾನವನೆಂದನುಮಾನ ಮಾಡಲೆಬ್ಯಾಡ ನಾನವತರಿಸುತಳೆ ದಾನವಿ ವಿಷಕುಚ ಪಾನದೊಳವಳಾ ಪ್ರಾಣವ ಹರಿಸಿದೆನೊ । ಕೇಳಿ ದೇವಾಶ್ಚರ್ಯ ಪೇಳುವೆ ರಾಘುಜ್ಞೆ ತಾಳಿಪೋಗುವ ಹನುಮ । ಕಾಲನೇಮಿಯು ವಿಷಜಾಲವ ಕುಡಿದವನ ಸೀಳಿದನೆಂತೆಂದನು[1] । ಹರಿ ಯೆಂದ ಜಾಂಬವ ಧುರಧೀರರೈ ನೀವು ನರನೇನು ಜರಿಯುದೀರೋ । ಭರದಿಂದ ನಗವೊಂದೆ ಕರದಿಂದಲೆತ್ತಿದೆ ಸುರವೃಂದ ನೋಡಿದರೊ । ರಾಮ ಸೇತುವೆ ಕಟ್ಟಲಾಮಹ ಕಪಿಗಳು ರೋಮರೋಮದೊ ಲೊಂದೊಂದು । ನೇಮದಿ ಗಿರಿಗಳಸ್ತೋಮ ತಂದಿತ್ತರೆಂಧಾಮಹ ಜಾಂಬವನು । ಮಗುವಿನಾಟದಿ ದೊಡ್ಡ ನಗಗಳ ಮುರಿದೆನೊ ನಗೆಯಲ್ಲ ಕೇಳೊ ಬೇಗ ಜಗದೊಳಗಾಶ್ಚರ್ಯ ವಿಘುಡ ಕೃತ್ಯ ಗಳಿಂದ ಭಗವಂತನೆಂಬೊರಾಗ । ಆಹಹ ನೀ ಜಗದೊಳು ಮಹಮಹಿ ಮನೆ ಕೇಳುಹುದಯ್ಯ ಹನುಮನಬ್ಧಿ । ಸಾಹಸದೊಳ್ ಹಾರುವ

---

೧. ಗಿಂಧಾ,

ರಭಸದೊಳ್ ಗಿರಿವರ ಬಹು ಭಂಗವಾದ ಸುದ್ದೀ । ಕಾಳಿಯ ಮಡು
ವಿನೊಳ್ ಹಾರಿ ಫಣಿಯ ಮೆಟ್ಟಿ ಸೀಳಿದೆ ಕೇಳಿದೆಯೊ । ಫಾಳಿಗ[1]
ರೂಪದಿಬಂದ ಖಳ ದೈತ್ಯನ ಕೊಂದ ಜಾಲವ ನೋಡಿದೆಯಾ ।
ಬಲಿಮುಖನೋರ್ವನು ಜಲಧಿಯೊಳ್ ಧುಮುಕಿ ತಾನೆಲೆಕಾಣದಲೆ
ಮುಳುಗಿ । ತಳದೊಳು ಛಾಯೆಯ ತುಳಿದು ಪಾತಾಳದೊಳ್
ಘಳಿಗೆಯೊಳ್ ಪೋದ ಸಾಗಿ ॥

**ಭಾಮಿನೀ**

ಏನು ಪೇಳಿದರೇನು ಮನದನುಮಾನ ತೀರದು ನಿನಗೆ ಯೆನ್ನೊಳು
ಕಾನನದಿ ಜೀವಿಸುವ ಜಂತುಗಳೇನು ತಿಳಿದಿಹವೊ । ಜ್ಞಾನ[2] ಮಾರ್ಗ
ಗಳ್ಯಾಕೆ ನಿನ್ನೊಳು ತಾನೆ ತೋರ್ಪುದು ಮುಂದೆ ರಣದಲಿ ದೀನ
ಜಾಂಬವ ಲಾಲಿಸೆಂದನು ದಾನವಾಂತಕನು ॥

**ಮಟ್ಟತಾಳ**

ಕೇಳಿ ಕೃಷ್ಣನ ನುಡಿಯ ಜಾಂಬವ ತಾಳಿ ರೋಷವ । ಪೇಳಿದೆನ್ನ
ಧುರದಿ ನೋಡೊ ಕಾಲಧಾಮವ । ಲೇಸನುಡಿದ್ಯೊ ಜಂಬವಂತ
ಈ ಸ್ಯಮಂತಕ ಆಸೆಗಳಾ ಇನ್ನು ಬಿಡೊ ದೂಷಣಾಂತಕಾ ॥
ನೋಡಿ ಜಾಂಬವನು ನುಡಿದನ್ಯಾಕೆ ಮಾನವ ಮೂಢಮತಿಯೆ
ಬ್ಯಾಡ ಹೋಗಿ ಸೇರೊ ಧಾಮವ । ವೀರಕೇಳೊ ನಿನ್ನ ಮನೆಯ
ಸೇರಬಂದೆನೊ । ಶೌರಿನಾರಿ ರತ್ನವೆನಗೆ ತೋರಿಸೆಂದನು ॥ ಎನಲು
ಕೋಪದಿಂದ ಜಾಂಬವ ರಣಕೆ ನಿಂದನು । ಕನಲಿ ಮುಸಲದಿಂದ ಹರಿಯ
ನೊಸಲಿಗ್ಹೊಡೆದನು । ಹರಿಯು ಮುಸಲ ಮುರಿದು ಬಾಣಗರೆದ
ನವನಿಗೆ । ಮರಳಿ ಮರಣ ಬ್ಯಾಡ ನಿನಗೆ ದುರುಳ ಮಾತಿಗೆ ॥
ದೊಡ್ಡ ಶಿಲೆಯನೆತ್ತಿ[3] ಜಾಂಬವ ಗುಡ್ಡದಿಂದಲೆ । ಹರಿಯ ಮೇಲೆ
ಹಾಕಿ ಗಿಡದ ಬಡ್ಡೆಯಿಂದಲೆ । ವೀರಕೃಷ್ಣ ಶರದಿ ಗಿರಿಯ ಚೂರು
ಮಾಡಿದ । ಬೇರ ಸಹಿತ ಸೀಳಿ ತರುವ ದೂರ ಕೆಡಹಿದ ॥ ಕೊಬ್ಬಿ
ಕೋಪದಿಂದ ಉಭಯರೊಬ್ಬರೊಬ್ಬರೂ ದಬ್ಬಿದೂಡಿ ವೀರರ್ ಕದನ
ಬೊಬ್ಬೆಗೈದರು । ಗದೆಯಗೊಂಡು ನಿಂದರುಭಯ ರೆದೆಯ
ಬಡಿಯುತ । ಹೃದಯ ಭೇದಿಸುವರ್ ಕದನ ಬಲಿದರಾಗುತ ॥
ಕೇಳು ಕೃಷ್ಣ ಏಳು ನಾಲ್ಕು ನಾಲ್ಕು ದಿವಸವಾಯಿತು । ಖಳ
ಖಳರ ಕೊಂದಶೌರ್ಯಕೇಳದ್ಹೊಯಿತು । ಸಿಟ್ಟಿನಿಂದ ಜಾಂಬವನ್ನ
ಅಟ್ಟಿಬಂದನು । ಕಷ್ಟಬಡುತ ಮೂರ್ಛೆಗೈದು ಸೃಷ್ಟಿಗೊರಗಿದನು ॥
ರಾಮ ರಾಮ ರಾಮ ಎನುತಲಾಮಹಾತ್ಮನು । ಭೂಮಿಗೊರಗಿ
ಬಳಲುತಿದ್ದ ರಾಮ ಭಕ್ತನು[4] ।

---

೧. ಫಾಳಿಲಿ ಬಂದಂಥ-ಪಾ. ೨. ಸ್ಥಾನ-ಪಾ. ೩. ಶಿಲವ-ಪಾ. ೪. ಕಿತ್ತು-ಪಾ.

### ಸಾವೇರಿರಾಗ–ಆದಿತಾಳ

ರಾಮ ಜಾನಕಿವಲ್ಲಭ ಕೈಸೋತೆನಲ್ಲ ಕ್ಷೇಮವೆಂದಿಗೆ ದುರ್ಲಭ ।
ಈ ಮಹಿಯೊಳಗೆ ಜನಿಸಿದ್ದು[೧] ಫಲವಿಲ್ಲದಾಯ್ತು ಹೇಮಗರ್ಭ
ನೊಳುದಿಸಿ[೨] ॥ ಆ ಮಹಾಕಪಿವರರ ಸ್ತೋಮಕ್ಕೆ ಮೊದಲು ಸ್ವಾಮಿ
ಯೆಂದೆನಿಸಿದೆನೆ[೩] । ರಾಮನ ದಯವೂ ತೀರಿತೇ ಈ ರಣದಿ ಕೂಪ
ಕೂರ್ಮನ್ಯಾಯವು ಬಂದಿತೇ ॥ ಸಿಂಧು ಬಂಧಿಸಿ ದನುಜರ ಕೊಂದಿ
ಹುದೆಲ್ಲ ಹಿಂದಾಯಿತಯ್ಯೊ[೪] ಮರ್ಯಾದ । ಇಂದಿರಾಪತಿ ನಾನೆಂಬ
ಈ ಮನುಜನ್ನ ನಿಂದಿಸಿದ್ದಾಯ್ತು ಅಪರಾಧ ॥

### ಭಾಮಿನೀ

ಭೂಮಿಪತಿ ಕೇಳಯ್ಯ ವಚನರ[೫] ರಾಮ ರೂಪವ ಮನದಿ ನೆನೆಯುತ
ಶ್ಯಾಮ ವರ್ಣನು ಕಂಡು ಮರುಗಿದನೀ ಮಹೀತಳದಿ । ಸ್ವಾಮಿ
ಭಕುತಿಗಳಲ್ಲಿ ಜನರೊಳು ರಾಮ ಭಕುತರನಿಂದೆ ನೋಡೆಂದಾ[೬] ಮಹಾ
ಜಾಂಬವಗೆ ತೋರಿಸಿದ ರಾಮ ರೂಪವನು ॥

### ಮಧ್ಯಮಾವತಿರಾಗ–ಆದಿತಾಳ

ನೋಡು ಜಾಂಬವ । ನೋಡೆನ್ನ ನಿಜವ ರೂಢಿಯೊಳವತಾರ
ಮಾಡಿದೆ ರಾಘವ । ನೋಡು ಜಾಂಬವ ॥ ಹರಿನೀಲರೂಪವ ವರಶರ
ಚಾಪವ ಖರನಖಿಲಾಕ್ಷಿ[೭] ಚರಣದೊಳರುಣವ ॥ ರಾಮರೂಪದಿ ಪೇಳ್ದ
ನೇಮದ ಮಾತಿಗೆ[೮] ಸೋಮಕುಲದಿ ಬಂದೆನೀ[೯] ಮಹಾ ರೂಪವ
ನೋಡು ಜಾಂಬವ ॥ ಅಳವಿಯೊಳಗೆ[೧೦] ನಿನ್ನ ಗೆಲುವೊರಿನ್ಯಾರುಂಟು
ತಿಳಿಯದೆ ಮನದೊಳು ಬಳಲಬ್ಯಾಡೆಂದನು ನೋಡು ಜಾಂಬವ ॥

### ಭಾಮಿನೀ

ಎದ್ದು ಜಾಂಬವ ಕೃಷ್ಣರೂಪ[೧೧] ಹದ್ದುಕರಗಳನಿಟ್ಟು ನೋಡುತ
ಶುದ್ಧ ರಘುರಾಮಾತ್ಮನೆ ನೀನೆನುತ ಬಿದ್ದ ಚರಣದಲಿ । ಯುದ್ಧ
ದಲಿ ಸಮನಾಗಿ ಕಾದಿದೆ ಬುದ್ಧಿಯಿಲ್ಲದೆ ಕರುಣ ರಸದೊಳುದ್ಧರಿಸು
ನೀಮುನ್ನ[೧೨] ಎನ್ನೊಳಗಿದ್ದ ದೋಷಗಳ ॥

---

೧. ಜೀವಿಸಿದ್ದು. ೨. ದೊಪಾ. ೩. ದೆಯೊ–ಪಾ. ೪. ತಲ್ಲಮ್ಯಾ-ಪಾ. ೫. ವಚನಕೆ-ಪಾ, ವನಚರ ? ೬. ನೋಡಿದೆ-ಪಾ. ೭. ಕರುಣ ಕಟಾಕ್ಷ-ಪಾ. ೮. ವ ನಡಿಸಲು-ಪಾ. ೯. ಬಂದೆನೋ-ಪಾ. ೧೦. ಅಡವಿ–ಪಾ. ೧೧. ಕೃಷ್ಣರೂಪವ ? ೧೨. ನೆನ್ನುತ-ಪಾ.

### ವಾರ್ಧಿಕ್ಯ

ಜಯ ಜಯಾ ದೀನಾಧ್ಯಕ್ಷ ಕುಲರಾಜ[1] ಹರಿಯಕ್ಷ ಜಯ ಜಯಾ
ಮತೋದ್ಧಾರಕಲಿತಾಟಕಾಮಾರ ಜಯ ಜಯಾ ಶತಾನಂದ ಜನನಿ
ಕೃತಸಾನಂದ ಜಯ ಜಯಾಗುಣಾಖಂಡ ಜಿತಶೈವ[2] ಕೋದಂಡ ಜಯ
ಜಯಾ ಕಲಾವಂತ ವರ ಜಾನಕೀ ಕಾಂತ ಜಯ ಜಯಾ ತುಳಾ
ಭಂಜನ । ಜಯಾಜಯಾ ವನ ಯಾತ್ರೀಕೃತ ಭಾನುಸುತ ಮಿತ್ರ
ಜಯ ಜಯಾ ಬಲಪ್ರಚುರ ಜಿತವಾಸವೀಸಮರ ಜಯ ಜಯಾ
ವಿಭೀಷಣಾವಂದ್ಯ ಜಯ ಲವಣ ನಿಧಿ ಬಂಧಜಯ ಜಯಾ ಸುನಿಶ್ಚಿಂತ
ಖಳರಾವಣಾದ್ಯಂತ ಜಯ ಜಯಾ ಜನೋದ್ಧರಣ ಜಯ ಮೈಥಿಲೀ
ರಮಣ ಜಯತೆಂದನಾ ಜಾಂಬವಾ ॥

### ಕೇತಾರಗೌಳ, ಅಷ್ಟತಾಳ

ಪಾಲಿಸೈ ಖಳವಂಶಾಭಿ[3] ರಾಮ । ಶ್ಯಾಮ ಸುಂದರ ಎನ್ನ
ಶ್ರೀರಘುರಾಮ ॥ ಪಲ್ಲವಿ ॥ ನಾಶಿಳಿಯದೆ ನಿನ್ನ ರಣ ಛಲದಿಂದ
ಖ್ಯಾತಿಗೋಸುಗ ಸೆಣಸಿದೆನೊ[4] ಗೋವಿಂದಾ । ಭೀತಿಯಿಲ್ಲದೆ
ನುಡಿದತಿ ರೋಷದಿಂದ ಪಾತಕಿಯನು ಕಾಯೊ ನೀದಯದಿಂದ ॥
ರಾಮ ರೂಪದಿ ನೀಯೆನಗಿತ್ತ ಮಾತ ನೇಮದಿ ನಡೆಸಯ್ಯ
ರಘುಕುಲಪೋತ ಈ ಮಣಿ ಮಗಳನ್ನು ನಿನಗಿತ್ತೆ ನಾಥ ಸ್ವಾಮಿ
ನೀ ಎನ್ನೊಳಗಾಗೊ ಸುಪ್ರೀತ ॥ ಉದ್ಧರಿಸಯ್ಯ ನಾನಿರಲಾರೆ
ಜಗದಿ ವೃದ್ಧಾಪ್ಯದಿ ನಾ ನಡೆತರಲಾರೆ ಮನದಿ । ವಿದ್ಯಾಬುದ್ಧಿಗಳೆಲ್ಲ
ಮರೆತಿದೆ ಮನದಿ ಇದ್ದು ನಾಫಲವೇನೊ ಹದ್ದಿನ ತೆರದಿ ॥

### ವಸಂತ ಭೈರವಿರಾಗ–ಏಕತಾಳ

ಧಾತಾಸಂಭವ ನೀ ಲಾಲಿಸೊ ಒಂದು ಮಾತಾ ಪೇಳುವೆನದ ಸಾಧಿಸೊ
ಭೂತಳದೊಳು ಜನ ಖ್ಯಾತಿಗೋಸುಗ ನಿನ್ನ ಪ್ರೀತಿಯಿಂದಲಿ
ಪ್ರಾಯದಾತನ ಮಾಡುವೆ ॥ ಆರಾಮ ಜನ್ಮದಿ ಮಾಡಿದ ಉಪ
ಕಾರಕ್ಕೆ ನಾ ನಿನಗಾಡೀದ ನಾರೀ ಕುಮಾರಿಯು ಧಾರೀಯು ನೆರ
ಕೊಂಡು[5] ಧೀರ ನಿನಗೆ ನಮಸ್ಕಾರವ ಮಾಡುವೆ ॥ ಚಂದಿರ ವಂಶದಿ
ಬಂದೆನೊ ವ್ರಜಮಂದಿರದಲಿ ನಾ ನಿಂದೆನೊ ನಿನ್ನ ನಂದನೆಯೊಳು
ಕೂಡಿ ಚಂದದೊಳಿರುವುದ ಆನಂದದಿ ನೋಡುತ ಮಂದಿರದೊಳಗಿರೊ ॥
ಲೋಕಾಪವಾದಕ್ಕೆ ರತ್ನವ ನಾ ಬೇಕೆಂದು ಬೇಡಿದೆ ಜಾಂಬವ ನೀ
ಕಾಣದೆನ್ನಯ ಕಾಕು ಮಾಡಿದ್ದರಿಂದ ಸಾಕೇತಪತಿ ವರನಾಕಾರ
ತೋರಿದೆ ॥ ಧಾತಾಸಂಭವ ನೀ ಲಾಲಿಸೊ ॥

---

೧. ಲಾಜ–ಪಾ. ೨. ಶೈವ–ಪಾ. ೩. ಧಿ–ಪಾ. ೪. ಫಣೆಸಿ–ಪಾ. ೫. ಕೊಟ್ಟು?

### ಮಟ್ಟುತಾಳ

ಕೇಳಿ ನುಡಿದನು ಜಾಂಬವಂತ ಶ್ರೀಹರಿಗೆ ಪೇಳಿದನು ನೀನು ಭಗವಂತ
ಪಾಲವಾರಿಧಿ ಕುವರಿ ಕಾಂತ ಪೂರ್ಣಸುಖ ನೀಲಗರ್ಭನೀ ಶ್ರೀಮಂತ
॥ ಪಲ್ಲವಿ ॥ ಜೀಯ ತಿಳಿಯದೊ ನಿನ್ನ ಮಾಯಾ ಎನ್ನದೀ
ಕಾಯ ಮನಸುತರೆನ್ನ[1] ಜಾಯ[2] । ತೋಯಜಾಕ್ಷನೆ ನಿನಗೆ ಪ್ರೀಯ
ವಾದುದನು ಸ್ವೀಕರಿಸೆಂದ ಮೃಗರಾಯ ॥ ನಾರಿಯರ ಕರೆದು
ಶ್ರೀ ಹರಿಯ ಕುಳ್ಳಿರಿಸಿ ಧಾರೆಯೆರೆದನು ಜಾಂಬವತಿಯ ।
ಪರಿತೋಷಕವಾಗಿ ಮಣಿಯ ಬೇಡಿದನು ವಾರಿಜಾಕ್ಷನು ಕರುಣ
ನಿಧಿಯ ॥

### ಭಾಮಿನಿ

ಮಾನವಾಧಿಪ ಕೇಳು ಮಂತ್ರವಿಧಾನದಿಂದಲಿ ಜಾಂಬವನು ಕನ್ಯಾದಾನ
ದಕ್ಷಿಣವಾಗಿ ರತ್ನವ ಶ್ರೀನಿಕೇತನಗೆ । ಮಾಣದಲೆ ತಂದಿತ್ತು ನಮಿಸಿದ
ಮಾನಿನೀಯರು ಶೋಭಾನ ಪಾಡುತ ಪಿಡಿದರಾರುತಿ ದಾನವಾಂತಕಗೆ ॥

### ಸೌರಾಷ್ಟ್ರರಾಗ–ತ್ರಿಪುಡೆ

ಇಂದಿರೇಶನು ಮುದದಿ ತನ್ನಯ ಸುಂದರಿಯ ಕರಹಿಡಿದು ತಾನಡೆ
ತಂದು ಜಾಂಬವನೊಳಗೆ ನಮಿಸಿದಾನಂದದಿಂದ ॥ ಹಿಂದೆ ನಾನಿನಗಿತ್ತ
ಭಾಷೆಯು ಸಂದುದೇ ನೋಡೆಂದು ನುಡಿದನು ವಂದಿಸಿದ ಪರದೇವ
ಭೂಸುರ ವೃಂದಳಿಗಗೆ ॥ ದಾಸನಲಿ ದಯವಿಟ್ಟು ಎನ್ನಯ ದೋಷ
ವೆಣಿಸದೆ ಪಾಲಿಸೆನ್ನನು ಈ ಸ್ಯಮಂತಕ ನೆವದಿ ಕಂಡೆನು ಶ್ರೀಶ ನಿನ್ನ ॥
ಆಯತಾಕ್ಷನು ಜಾಂಬವನ ಜರತ್ಕಾಯವನು ಸುರೆಸೀಳಿ ಚಕ್ರದಿ
ಘಾಯವಿಲ್ಲದ ತೆರದಿ ಮಾಡಿದ ಪ್ರಾಯದವನ । ಯೌವನದ ಸೊಬಗಿ
ನಿಂದ ನೆರೆಯುವ ಭವ್ಯ ದೇಹವ ನೋಡಿ ಜಾಂಬವ ಸೇವ್ಯಸೇವಕನಾಗಿ
ಶ್ರೀಹರಿ ಕಾಯ್ವನೆಂದ ॥

### ಭಾಮಿನಿ

ಕುಂಭಿನೀಪತಿಕೇಳು ಗಗನದಿ ಅಂಬುಜಾಸನ ಮುಖರ ದೈವ ಕದಂಬದಲಿ
ದುಂದುಭಿಯನರೆದರಾಡಂಬರೋತ್ಸವದಿ । ಸಂಭ್ರಮದಿ ಪೂಮಳೆಯ
ಕರೆದರು ಅಂಬುಜಾಕ್ಷಗೆ ಜಾಂಬವತೀ ಸುನಿತಂಬಿನಿಯಾಗಿಹಳು ಭುವನ
ದೊಳೆಂಬ ಸಂತೋಷದಲಿ ॥

—: ಪ್ರಥಮ ಸಂಧಿ ಸಂಪೂರ್ಣಂ :—

---

೧. ಮಾನ-ಪಾ. ೨. ಜೀವ-ಪಾ.

# ದ್ವಿತೀಯ ಸಂಧಿ

### ಭಾಮಿನೀ

ಸೃಷ್ಟಿಯಧಿಪನೆ ಕೇಳು ನೀ ಕಿವಿಗೊಟ್ಟು ಮುಂದಣ ಕಥೆಯ
ಬಿಲದೊಳು ಕೃಷ್ಣ ಜಾಂಬವರುಭಯಸಂಗರವ ರಷ್ಟವಿಂಶಾಹ । ಮುಷ್ಟಿ
ಯಲಿ ಕಾದಿದರು ಮುಂದಿನ ದೃಷ್ಟಿಯಿಂದೊಳಗಿತ್ತು ಕಾದಿಹ
ವೃಷ್ಟಿಯದು ಭೂಪಾದಿಗಳು ಭಯಪಟ್ಟು ಚಿಂತಿಪರೂ ॥

### ಕಾಂಬೋದಿರಾಗ–ಝಂಪೆತಾಳ

ನೋಡಿತಡೆಯದೆ ರಾಮಗಾಡಿದನು[೧] ಕೃತವರ್ಮ ಕೂಡಿದ ಜನರೆಲ್ಲಾ
ಬಲನೋಡಿಕೇಳು ಹರಿಗೇನಾಯ್ತೊ ಗಾಡ[೨] ತಿರುಗದೆ ಪೋದ
ಮೂಢರಂದದಿ ಕುಳಿತಿರೇನೈ ॥ ಸೇನೇಯು ನುಡಿದನೀ ಸೇನೆ
ಪೋಗಲಿ ಪುರಕೆ ದಾನವಾರಿಯನಿರವ ನೋಡಿ । ಪ್ರಾಣದೊಳಗು
ಳಿದಿಹನೋ ಕಾಣದಡಗಿದನೇನೋಏನಾದನೆಂದು ನಿಜಮೂಡಿ । ಗದ
ನೆಂದನೀ ವನದಿ ಮಧುರ ಫಲ ಮೊದಲಿಲ್ಲಾ ಉದರಾಹಾರವೇ ಕಾಣ
ದಿರಲು । ಕದನ ಬಲವಿಲ್ಲದೆಯದುಸೈನ್ಯ ಮಡಿಯುವುದು ಮಧುರಾ
ಪುರಿ ಮಾರ್ಗಗಳ ನೋಡಿದ ಉದ್ಧವತಾ ಪೇಳಿದನು ಇದ್ದರೀ ವನ
ದೊಳಗೆ ಹದ್ದುಗಳ ವಶವೇ ಕೇಳ್ ಬದ್ಧ । ಕದ್ದು ಪೋದರೆ ಕೃಷ್ಣ
ಎದ್ದು ಬಂದರೆ ನಮ್ಮ ಒದ್ದು ಕೊಲ್ಲುವ ಮೃತ್ಯು ಸಿದ್ಧಾ ।
ಬಲರಾಮನಿಂತೆಂದಾ ಬಲು ದಿನದಳು ಬಳಲಿದೆನು ಬಲವಂತನವನು ತಾ
ಬರುವ । ತಿಳಿಯದಲೆ ಕುಳಿತ ದಿನಗಳಿದರೇನುಂಟೆಂದು ಬಲ ಸಹಿತ
ಪುರಕೆ ನಡೆತಂದ ॥

### ಭಾಮಿನೀ

ಇಳೆಯಧಿಪ ಕೇಳಿಂತು ಬಿಲದೊಳು ನಳಿನನಾಭನು ಪೋಗಿ ಬರದಿಹೆ
ಉಳಿದಯಾದವರೆಲ್ಲ ಬಹುದಿನ ನೋಡಿ ಬಳಲುತಲೀ । ಘಳಿಗೆಯೊಳು
ಕಲಿಮೊಗದ ಮಧುರೆಯು ಪ್ರಳಯ ಮಾಡುವನಿಲ್ಲಿ ಕುಳಿತರೆ
ಕಳವಡಿಸಿ ಬಸವಳಿದು ನುಡಿದರು ಪೇಳಲಸದಳವು ॥

### ಸೌರಾಷ್ಟ್ರರಾಗ–ತ್ರಿಹುಡೆ

ಬಂದರಾಗ ಬಲಾದಿಯಾದವರೆಂದು ಮಧುರೆಗೆ ಇಂದಿರಾಪತಿ ಇಂದು
ಶೂನ್ಯವು ನೋಡಿ ನುಡಿದರು ಬಂಧು ಜನರೂ । ಯಾದವಾಗ್ರಣಿ
ಕೇಳು ಬಿಲದೊಳು ಮಾಧವನ ಮುಖವ ನೋಡಲು ಹೋದವರು
ಮರುಳೆಲ್ಲ ಬಂದಿದೆ ಆದುದೇನಯ್ಯಾ ॥ ಹಿಂದೆ ಮುಂದಾಡುವರ
ಕಾಣುತ ಸಂದೇಹ ಬಂದೊದಗಿ ದೇವಕಿನಂದನನ ಬೆಸಗೊಂಡರಾ ಜನ
ಸಂದಣಿಯಲ್ಲಿ ॥

---

೧. ರಾಮನಾಡಿದನು ಪಾ.  ೨. ಗಾಢ?

## ರೂಪಕ ತಾಳ

ಏನಯ್ಯಾ ಬಲರಾಮಾ ದಾನವಾರಿಯು ಕಾಣೆ ಏನಯ್ಯಾ ವನದಾ
ವಾರ್ತೆಗಳೂ । ಕಾಣುವ ಜನರೂ ಮಾನ೧ವೇತಕೆ ಮನದಿ ಮಾನೀತ
ನೆಲ್ಲಿರುವ ವೇಳೊ ॥ ಬಳಲುವ ಮಾತೆಗೆ ಬಲನು ತಾ ನುಡಿದನು
ಬಲುಘೋರವನದಿ ಬಲವೆಲ್ಲ । ಇಳಿರಾಯನರಸಲು ಕಲಿಸಿಂಹನುಗು
ರಿಂದ ಅಳಿದ ದೇಹವ ಕಂಡರೆಲ್ಲ ॥ ಅಂಬಾ ಲಾಲಿಸು ಸಿಂಹನ ಜಾಂಬವ
ತಾ ಕೊಂದು ಕುಂಭಿನೀ ಬಿಲಸೇರಿದನು । ಅಂಬುಜಾಕ್ಷನು ರತ್ನ
ದ್ಹಾಂಬದೋಳ್ ಆ ಗವಿಯೋಳ್ ಅಂಬು ಕೈಕೊಂಡು ನಡೆದಿಹನು ॥
ರಕ್ಕಸಾರಿಯು ಗವಿಯೊಳ್ ಹೊಕ್ಕು ದಿಸ ನಾಲ್ಕೇಳು ದಿಕ್ಕು
ಕಾಣದೆ ಪೋದಾನೇನು । ಸಿಕ್ಕಾನೆಂಬಾಸೆಯೊಳ್ ಸೊಕ್ಕಿ ಸೊರಗಿ
ದೆವಲ್ಲಾ ಶಕ್ಕಾ೨ಹಾರಾದಿಗಳಿಲ್ಲಾದಿರಲೂ । ಆದರಿನ್ನೊಂದು ಕೇಳ್
ಮೇದಿನಿಯೊಳು ಕೃಷ್ಣ ಗಾಥ ಬಲವರ್ಣನಾಗಿಹನು । ಹೋದ ಕಾರ್ಯ
ವ ಮಾಡಿ ಮೋದದಿ ಬರುವನು ನೀಧೈರ್ಯಳಾಗೆಂದಾ ಬಲನು ॥

## ಭಾಮಿನೀ

ಮೇದಿನೀಪತಿ ಕೇಳು ನಂದನಪೋದ ವಾರ್ತೆಯ ಕೇಳಿ ದೇವಕಿ
ಹೋದಳತಿಶಯ ಮೂರ್ಛೆಯನು ಮಿಗಿಲಾದ ಮಾತೇನು ।
ಸೋದರದೊಳೆಡಬಲದ ನಾರಿಯರಾದರಿಸಿ ಮತಿಗೈದು ಮೆಲ್ಲನೆ
ಯಾದವಾಗ್ರನ ಪದದಿ ಬಿದ್ದ ವಿಧಾನವೇನೆಂಬೆ ॥

## ಸಾವೇರಿ

ಪತಿಯೇ ನಿನ್ನ ಸುತನು ವನದಿ ರತುನಾ ನೋಳ್ಪಾ ನೆವದಿ ।
ರಥವಾಜಿ ಸೈನಿಕರೂ ಸಹಿತ ಹಿತದಿ ಪೋದಾ ಭರದಿ ॥ ೧ ॥
ಇಳಿಯಾ ಪಾಲಾನಳಿದೂ ಮಣಿಯಾ ಸೆಳೆದೊಯ್ದಾ ಜಾಂಬವನ ।
ಬಿಲಪೊಕ್ಕು ಬಲಸೋದರನು ಬಲುದಿನಾಯ್ತು ಬರನೊ ಇನ್ನೂ
॥ ೨ ॥ ಬೆನ್ನಿನಲ್ಲೆ ಬಂದವರ ಮಾತನ್ನ೩ ಕಣ್ಣೀನಿಂದ
ನೋಡಿ ಕಳೆದ ಅರಣ್ಯದೊಳವನ ॥ ೩ ॥ ಹುಟ್ಟಾ ಮೊದಲು
ಕೃಷ್ಣನನ್ನು ದೃಷ್ಟಿತಾಕೀತೆಂದು । ನೆಟ್ಟನೆ ನೋಡಲಿಲ್ಲಯ್ಯೋ
ಭ್ರಷ್ಟಳಾದೇನೆಂದು ॥ ೪ ॥ ಅಷ್ಟಾಮಾತ್ಯರಿಂದ ಕೂಡಿ ದುಷ್ಟ
ನೆಂದೂ ಮಗನ ಬಿಟ್ಟು ವನದಿ ಬಲಗೇ ಪಟ್ಟಗಟ್ಟಿರೈ ಭುವನ ॥ ೫ ॥
ಏನಾದನೋ ಸೂನು ಎನ್ನ ಕಾನನದಿ ರನ್ನ ನೀನ್ಯಾಕೆ ಯೋಚಿ
ಸುವೆ ಬಲನಾಧೀನ ಸಕಲಾಮಾನ್ಯ ॥ ೬ ॥

---

೧. ಜನರೂ ಮೌನ–ಪಾ. ೨. ಪಕ್ಕಾಹಾರಾದಿ–ಪಾ. ೩. ಬಂದ ಅನ್ನ ಮಾತ ತನ್ನ ?

### ಭಾಮಿನೀ

ಜಗಧಿಪತಿ ಕೇಳಿಂತು ಶೌರಿಯು ಸುಗುಣೆಯುಳ ಮಾತಿಂಗೆ ಮರುಗುತ
ಮಗನ ಮೋಹನ ರೂಪ ಚಿಂತಿಪನಿನಿತು ಶೌರ್‍ಯದಲಿ । ನಗಧರನ
ಕರೆದೊಯ್ದು ವನದೊಳು ಮೃಗಬಿಲದಿ ಬಿಟ್ಟಗಲಿ ಬಂದರು ನಗೆ
ಯೊಳಗೆ ಹಗೆ ಮಗನ ಕೊಂದಿಹುದಂದವಾಗಿಹುದು ॥

### ಕಾಂಭೋಧಿರಾಗ–ಝಂಪೆ

ವಸುಧಿಯೋಳ್ ಒರಗುತ್ತ ವಸುದೇವನಳಲಿದನು ಬಸುರ ಬಾರಿಸುತೆನ್ನ
ಕಂದ ಕಂದ । ವಿಷಮ ವನದೊಳಗ್ಯಾಕೆ ಬಿಸಿಲುಗಾಳಿಗೆ ಸೋಕಿ
ಬೆಸುಸುಯ್ಯ್ಯಾಬ್ಯಾಡ ಬಾ ಕಂದ ಕಂದ ॥ ಬಲರಾಮ ನಿನಗೇನು
ಬಳಲಿಸಿದ ವನದೊಳಗೆ ತಿಳಿಸಲಾದರೂ ಬಾರೊ ಕಂದ ಕಂದ । ನಳಿನಾಕ್ಷಿ[೧]
ನಿನ್ನ ಮುಖ ಥಳಿಗೆಯುಗಲಿ ಜೀವಿಸಲಾರೆನೆಂದಳು ತಿಳಿದು ಕೇಳು ಬಾರೊ
ಕಂದ ಕಂದ ॥ ಇಳೆಯೊಳಗೆ ಸತ್ರಾಜಿತ ಕಳವ ಹೊರಿಸಿದನೆಂದು
ಕಳವಳಿಸಬ್ಯಾಡ ಬಾ ಕಂದ । ಥಳಿಗೆಯೊಳಗಾಮಣಿಯ ತಿಳಿದು
ತರಿಸುವೆ ನಿನ್ನ ಸುಳುವ ತೋರಿಸಬಾರೊ ಕಂದ ॥ ಏನಯ್ಯ
ಬಲರಾಮ ಸೇನೆಯ ಕೃತವರ್ಮ ಏನಾದ ಪೇಳೆನ್ನ ಕಂದಾ ।
ಕಾನನದ ಪಥವ ನೆಲೆಕಾಣದೆಲೆ ಸುತ್ತುವನೋ ದೀಪರಂದದೊಳೆನ್ನ
ಕಂದಾ ॥ ಚಂದಾವಾಯಿತು ನೀವು ಬಂದದ್ದು ಸುಖದೊಳಗೆ
ಎಂದಿಗಾದರೂ ಎನ್ನ ಕಂದ । ಇಂದಿರೇಶನ ದಯದಿ ಮಂದಿರಾತೆರೆದು[೨]
ಸುಖದಿಂದ ಜೀವಿಸಲೆನ್ನ ಕಂದಾ ಕಂದ ॥

### ಭಾಮಿನೀ

ಕೇಳು ಕುಂಭೀಪಾಲ ಭೀಷ್ಮನ ಬಾಲೆಯಾಳು ತಿಳಿದೇಳಲಾರದೆ ಥಾಳಿ
ಯಲಿ ತಲೆಬಾಗಿ ಬೀಳ್ವಳು[೩] ಬಾಳೆಸುಳಿಯಂತೆ । ಪೇಳಲೆಸದಳವೇನು
ಮೋಹಸ್ಮಾಲೆ ಸರ ಸೂರ್‍ಯಾಡಿ ಸಭೆಯೊಳು ಗೋಳಿಡುತಲೆ ಬಿದ್ದು
ದೇವಕಿ ಕಾಲಪಿಡಿದಿಹಳು ॥

### ಸಾವೇರಿರಾಗ–ಆದಿತಾಳ

ಅಮ್ಮಾ ನಾ ತಾಳಲಾರೆನೆ ಶ್ರೀಪತಿಯ ವಿರಹ ಸುಮ್ಮನೆ ಇರಲಾರೆನೆ ।
ಕರ್ಮಪೆಂತಿಹುದಿನ್ನೇನು ಈ ಭುವನದೊಳು ಬೊಮ್ಮಾತಾ ಬರೆದನೇನೊ
॥ ೧ ॥ ಭಾವಮಾವಗಳೆಲ್ಲರೂ ಆ ವನದೊಳು ದೇವನೋರ್ವನ
ಬಿಟ್ಟರು । ಜೀವದೊಳಿರುವನೇನೊ ಭಾವಜಪಿತನು ದೇವಕಿ ಪೇಳೆ

---

೧. ನಳಿನಾಕ್ಷ–ಪಾ. ೨. ಮಂದಿರಕ್ಕೆತಂದು. ೩. ಬೀಳುತ–ಪಾ.

ನೀನಾರೂ ॥ ೨ ॥ ಜಗದೀಶರನು ಜರಿದು ತಾನಾಗಿ ಬಯಸಿ ನಿನ್ನ ನಗಧರೇಶನ ಕೂಡ್ದಲು । ಹಗೆಯು ತಂದೆಯು ಮನೆಯೊಳು ಸರಿ ಸುಗುಣೆಯರೊಳು ನಗುವರೀಪರಿ ಜಗದೊಳು ॥ ೩ ॥ ಧಾತ ಸಂಭವ ಪೇಳಿದ ಮಾತಿಗೆ ನಾನು ಈತಗೆ ಮರುಳಾದೆನೆ । ಭೂತ ಳೇಶರಾಜರಿದ್ದು ಈ ವನದೊಳು ಮನವಾ ಸೋತು ಬಂದೆನು ಮುಂದೇನು ॥ ೪ ॥ ಕೇಳಿದರಿದ ಕಿವಿಯಲ್ಲಿ ಶಿಶುಪಾಲನು ಹಸ್ತತಾಳದಿ ನಗುವ ತಾನಲ್ಲಿ । ಬಾಳಿದ್ದು ಫಲವೇನಿಲ್ಲಿ ತಾಳದೆ ಶೋಕದಿ ಬೀಳುವೆನಗ್ನಿಯಲ್ಲಿ ॥ ೫ ॥ ಒಂದಾರು ಸುಖ ನೋಡಿಲ್ಲ ಈ ಮನೆಗೆ ಬಂದು ಇಂದಿಗೆ ವರ್ಷವಾಗಿಲ್ಲ । ನಂದನ ರನು ಕಂಡಿಲ್ಲ ಮುಂದೆನ್ನ ಪ್ರಾಯ ಸಂದು ಸಂಭ್ರಮ ತೀರಿಲ್ಲ ॥ ೬ ॥ ಕಡೆಗಣ್ಣಿಂದಾ ಗೋಪಿಯರಾ ನೋಡಗೊಡದಿದ್ದೆ ಸಡಗರದೊಳಗುಬ್ಬಿದ್ದೆ । ಮಡದೇರನೆಲ್ಲ ಮರೆಸಿದ್ದೆ ಕಡುಮೊದ ಲಿಲ್ಲದೊಡವೆ ವಸ್ತ್ರಾದಿಗಳ ಧರಿಸಿದ್ದೆ ॥ ೭ ॥ ಎಡಬಲದಲ್ಲಿ ದಾಸಿಯರು ದ್ವಾರಕಾಪುರಕೆ ಒಡೆಯಳೆಂತೆಂದು ಸಾರುವರು । ಪೊಡವೀಶಮಾತ್ಯರೆಲ್ಲರೂ ಕಡು ಕೋಪಕ್ಕೆನ್ನ ಗಡಗಡ ನಡು ಗುವರು ॥ ೮ ॥ ಎಲ್ಲಾ ಭಾಗ್ಯವನಳಿದ ಈ ಹುಲ್ಲು ದೇಹದಲೆ ಮೋಹಗಳಿನ್ನೇನೂ । ವಲ್ಲಭನಗಲಿ ನಾನು ಭುವನದೊಳು ಒಲ್ಲೆನೀ ಜನ್ಮವನ್ನು ॥ ೯ ॥

**ವಾರ್ಧಕ್ಯ**

ಯಾರಿಗುಸುರಲಿ ವ್ಯಸನವನು ಮತ್ತಾರಿಗಾಲ್ಪರಿದ್ದೇಳಿಕೊಳ್ಳಲಿ ಯಾರ ಹಂಗಿನವಳಾಗಿ ಜೀವಿಸಲಿ ಯಾರ ಮೊರೆ ಹೋಗಲಿ । ಭಾರವಾದೆನು ಜಗಕೆ ಎನ್ನಯ ತೌರು ಮನೆಯವರೆಲ್ಲ ದುಮ್ಮಾನ ವೈರವೆಸಗುವರು ಮಥುರೆ ದ್ವಾರಕೆ ದೂರವೆನಗಾಯ್ತು ॥ ಇಂತೆಂದು ಸಂತಾಪಿಸುವ ಕಾಂತಾಶಿರೋಮಣಿಯಳಸಂತೈಸುತಾ ಪಿಧಿಸುತ ಪೇಳ್ದನಾನೆಂತೆನೆ ॥

**ಮಧ್ಯಮಾವತಿ, ಆದಿತಾಳ**

ಬಳಲಾಬ್ಯಾಡಮ್ಮ ನೀ ನಳಿನಾಕ್ಷಿ ಮನದೊಳು ಪ್ರಳಯ ಕಾಲದಿ ಕೃಷ್ಣನಳಿಯ ನೀ ಕೇಳು ॥ ೧ ॥ ಎನಲು ತಾನೆಂದವಳು ವನಜ ಪೀಠಜನೆ ವನಜಾಕ್ಷನಿರುವನೆ ನಿಜವ ಪೇಳೆನಗೆ ॥ ೨ ॥ ಜಲಜಾಕ್ಷ ನಿರುವನು ಹಲುಬಾದಿರಮ್ಮಾ ತಿಳಿಯಾದೆ ಸುಮ್ಮಾನೆ ಗಳಶೋಷ

---

೧. ಜಗದೀಶನನು-ಪಾ. ೨. ನಾ-ಪಾ. ೩. ಎಡಬಲದಾ-ಪಾ. ೪. ತೆಂದುಸುರುವರು-ಪಾ. ೫. ಹೊಲ್ಲ-ಪಾ. ೬. ಬಾಯ್ದುರೆದ್ದೇಳಿಕೊಳ್ಳಲಿ-ಪಾ. ೭. ವೈರವೆತ್ತರು-ಪಾ. ೮. ಪೇಳ್ವನದೇನೆಂತೆನೆ.

ವಮ್ಮ ॥ ನಳಿನಲೋಚನೆ ಕೇಳು ಕಳವಿನ ಮಾತ ತಿಳಿದು ಪೋದನು ಪೇಳು ಬಲುಮಾನವಂತ ॥ ೩ ಆದರೀ[1]ಪುರದುರ್ಗಾರಾಧನೆ ಮಾಡವಮ್ಮಾ ಪೋದ ನಾಥನ ಕಂಡು ಮೋದಿಸುವೆಯಮ್ಮ ॥ ೪ ॥ ಯೋಗಿ ವರ್ಯರೆ ನಿಮ್ಮ ಮಾತಿನ ಮೇಲೆ ಆ ಗೌರಿ ಪೂಜೆಯ ಮಾಡುವೆ ನಾಳೆ ॥ ೫ ॥ ಆಗೆನ್ನ ಮಾತ ನೀತೂಗಿ ನೋಡಮ್ಮ ನಾಗಲೋಕ ಕೆ ನಾನು ಪೋಗುವೆನಮ್ಮಾ ।

## ಭಾಮಿನೀ

ತಿಳಿದು ಮುನಿಪೇಳಿದನು ಪ್ಯೈ ಕ್ಕೈ ತೊಳೆದು ಶುಕ್ಲಾಂಬರವ ಧರಿ ಸುತ ಘಳಿಗೆಯಲಿ ಫಲಪುಷ್ಪ ತುಲಸಿತೋಯ ಕಲಶಗಳಂ ಸಲೆ ಸುಗಂಧಾಕ್ಷತೆ ಹರಿದ್ರಾದಿಗಳ ಕೈಕೊಂಡಂಬಿಕಾಲಯಕೆ ಬಾಲೆ ರುಕ್ಮಿಣಿ ಸಾರ್ದು ಪೂಜಿಪಳೇಳು ದಿವಸಗಳು ॥

## ಸಾಂಗತ್ಯ

ಬಂದು ತಾನಂಬಿಕೆಯ ಮಂದಿರದೊಳು ಭೀಷ್ಮನಂದನೆ ತಾ ಪೂಜಿಸಿ ದಳು । ಚಂದ್ರಶೇಖರನರಸಿ ವಂದಿಸಿ ಬಲಕೆಂದು ಗಂಧ ಕುಸುಮ ವನೇರಿಸಿದಳು ॥ ಮಾತೆಯೆನ್ನಯ ನಾಥನ ಮುಖವನ್ನು ನೀ ತೋರಿಸೆಂದು ಬೇಡಿದಳು । ಭೂತೇಶನರಸಿಯೆ ಮಾತ ನೀ ನಡೆ ಸಿದರೀತನುವನುಳಿಸುವೆನೆಂತೆಂಬೊಳು ॥ ಸಾಪಾಟಿಯವರೆಲ್ಲ ಶ್ರೀ ಪತಿಯ ವಿರಹಕ್ಕೆ ನಾಪಾಪಿಎಂದು ನಿಂದಿಸುವರು । ಹೇಪಿನಾಕಿನಿರಾಣಿ ಪೊರೆಯೆ ನಾ ಗಂಡುದೀಪವ ಹೊರುವೆನನುದಿನದಿ ॥

## ಭಾಮಿನೀ

ಧಾರುಣೀಪತಿಕೇಳು ರುಕ್ಮಿಣಿ ನಾರದನು ನುಡಿದಂತೆ ದಿನದಿನದಾರು ಸಂಖ್ಯದಿ ಪೂಜಿಸಿದಳಾ ಗೌರಿದೇವಿಯನು । ಶೌರಿಸತಿಯಳಾ ಕಡಡಿ ದಂತಃಕರಣದಲಿ ಶರ್ವಾಣಿ ಪೀಠದಲಿ ತೋರಿಸಿದಳು ತನ್ನಿರವನೀಪರಿ ನಾರಿ ಪೇಳಿದಳು ॥

## ಅಷ್ಟತಾಳ

ವಿಳಮ್ಮಾ ರುಕ್ಮಿಣಿಯೆ ಎನ್ನಯ ಮಾತಾ ಕೇಳಮ್ಮಾ ಗುಣಮಣಿ ಯೇ ॥ ಪಲ್ಲವಿ ॥ ಬಾಳು ಸೌಮಾಂಗಲ್ಯ ತಾಳಿ ಸೌಭಾಗ್ಯದಿ ಬಾಲೆ ನಿನ್ನಯಪತಿ ಬಲವಂತನಾಗಲಿ ॥ ೧ ॥ ಪತಿಸುತರಿಂದ ದೇವಿ

---

೧. ಆದಕೀ-ಪಾ. ೨. ಆರು-ಪಾ.

ಲೋಕದಿ ನಿನ್ನ ಜೊತೆಯರಿಲ್ಲೆಂದೆನ್ನುವಿ೧ । ಮತಿಹೀನಳಾಗಿ ನೀ
ವ್ಯಥಿಸಬೇಡೆನ್ನುತ ಪತಿಯು ಬರುವನು ನಿನಗತಿಶಯವಾಗಲಿ ॥ ೨ ॥
ಏನು ಇದೇನಾಶ್ಚರ್ಯವೊ ಮೇದಿನೀಯೊಳಗಾದ ಮಾತು ಶ್ರೀ
ಹರಿಯು । ಹೋದರಾವನದೊಳಗಾದ ಬಾಧೆಗಳೇನು ಯಾದವೇಶಗೆ
ಸಮನಾದವರುಂಟೇನೆ ॥ ೩ ॥ ಇಂದಿಗೇಳನೆ ದಿನದಿ ದ್ವಾರಕೆಗೆ
ಗೋವಿಂದ ಬರುವ ಮುದದಿ । ಸುಂದರಿ ನೀಮನ೨ ಗೊಂದಲ ಮಾಡ
ದೊಂದೆಭಾವದೊಳಿರು ಸಂದೇಹವೇತಕ್ಕೆ ॥ ೪ ॥

## ಭಾಮಿನೀ

ಕ್ಷೋಣಿಪತಿ ಕೇಳಿಂತು ವರ ಶರ್ವಾಣಿ ಕರುಣದಿ ರುಕ್ಮಿಣಿಯು ನಿಜ
ಪಾಣಿಯಲಿ ಮೈದಡವಿ ಮನ್ನಿಸಿ ಮುಖವನೇ ಒರೆಸಿ । ಪ್ರಾಣಕಾಂತನು
ಬರುವ ನಿನಗನುಮಾನ ಬೇಡೆಂದೆನುತ ನಾಡಿಯುತ ಕಾಣದಡಗಿದಳಲ್ಲಿ
ತನ್ನಯ ಪಾಣಿ ಪೀಠದಲಿ ॥ ಈ ವಿಧದಿ ಪದುಮಾಕ್ಷಿ ಪತಿಯೊಳು
ಭಾವಭಕ್ತಿಗಳಿಂದ ದಿನದಿನ ದೇವಿಯನು ಬಲಗೊಂಡು ಕೇಳ್ವಳು೩
ದೇವಕೀಸುತನಾ । ಆ ವನದಿ ಬಿಲದಿಂದ ಕೃಷ್ಣನು ತಾ ವನದಿ ನಡೆ
ತಂದು ಜಾಂಬವ ದೇವನೊಳು ನಮಿಸಿ ಬಂದನು ಭಾಮೆಯಳ ಸಹಿತ ॥

## ಕೇತಾರಗೌಳರಾಗ–ಅಷ್ಟತಾಳ

ಬಂದು ನೋಡಿದ ಬಿಲದಿಂದ ಗೋವಿಂದಾ ಸುಂದರಿ ಕೇಳೆಂದನು ।
ಮಂದಿಕುದುರೆ ಬಲಒಂದುಳಿಯದೆ ಭಯದಿಂದೆಲ್ಲ ಪೋದರೇನು ॥ ೧ ॥
ಏನಿದೇನಾಶ್ಚರ್ಯ ಸೇನೇಯ ಬಲವೆಲ್ಲ ಏನಾದರೊ ವನದಿ ।
ಕಾನನದೊಳಗನ್ನಮಾನಪಿಲ್ಲದೆ ರಾಜಧಾನಿ ಸೇರ್ದರೊ ಜವದಿ ॥ ೨ ॥
ಆದರೇನಾದುದು ಪೋದೇನೆಂದರೆ ಪುರದ್ವಾರದಿಯು ನೋಡಿಲ್ಲ । ಕಾದು
ಬಾಗಿಲದೊಳಿರ್ದ ಯಾದವರುಗಳೆಲ್ಲ ಪೋದರೆನಗೆ ಜೋಡಿಲ್ಲ ॥ ೩ ॥
ಅತಿಕೋಮಲಾಂಗಿಯಾಗಿಹ ಎನ್ನ ಸತಿ ಜಾಂಬವತಿ ನೀನು ನಡೆಳತರುವ
ಪಥವ ಕಾಣೆನು ತಾ೫ ಸಂಸ್ಕೃತಿಗೈದು ವನಿತೆಯ ಸುಖವನೋಲಗವ
ಮಾಡುವ೬ ॥ ೪ ॥

## ಭಾಮಿನೀ

ಉತ್ತರಾಸುತ ಕೇಳು ಮನದಲಿ ಚಿತ್ತಜಾತನ ಪಿತನ ಮನದಲಿ ಸತ್ವರದಿ೭
ನೆನೆದಿರಲು ಖಗಕುಲಸತ್ತಮನುಬಂದು । ಹೊತ್ತು ತಾ ಸತಿಪತಿಯರು

೧. ಲ್ಲೆಂದಾಗುವಿ–ಪಾ, ೨. ಸುಮ್ಮನೆ-ಪಾ, ೩. ಕೇಳಲು--ಪಾ, ೪. ಯನ್ನಕರೆ–ಪಾ,
೫. ಕಾಣೆನೆನುತ್ತಾ–?, ೬. ಸಂಸ್ಕೃತಿಗೈದು ವನಿತೆಯ ಸುಖವನೋಲಗವ ಮಾಡುವೆ-ಪಾ.
೭. ಸತ್ವರದಿ–ಪಾ.

ಭಯರನೆತ್ತ್ರಿ ಗಗನವ[1] ಭೋಜಪೋತನ ಪಟ್ಟಣದ ಮುಂಬಾಗಿಲೊಳು ತಂದಿತ್ತನಸುನಗುತ ॥

### ಸೌರಾಷ್ಟ್ರರಾಗ-ತ್ರಿಹುಡೆತಾಳ

ಬಂದನಾ ಮುರಹರನು ಜಾಂಬವನಂದನೆಯು ಕರಪಿಡಿದು ಪುರವಲಿ ಬಾಂಧವರ ನೋಡೆಂದ ನಿಮಗಾನಂದವೇನ್ನೈ । ವಂದಿಸಿದ ಮಾಧವನು ಮಾತೆಗೆ ತಂದೆವಸುದೇವನಿಗೆ ಬಲನಿಗೆ ಸುಂದರಿಯರಾರತಿಯ ತಂದರು ಚೆಂದದಿಂದಾ ॥ ೧ ॥ ನಂದನನ ಮುಖ ನೋಡಿ ನಗುತಾನಂದದಲಿ ವಸುದೇವತಾ ನಡೆತಂದು ಬಿಗಿದಪ್ಪಿದನು ಬಾಗೋವಿಂದನೆಂದು । ಎಷ್ಟು ನೋಯಿಸ್ಸಿದ ನಿನಗೆ ರಣದಲಿ ಆ ದುಷ್ಟ ಜಾಂಬವನೆಂದು ಮೈ ಕೈ ಮುಟ್ಟಿ ನೋಡಿದ ನೆಟ್ಟ ಪಲ್ಗಳ ದೃಷ್ಟಿಯಿಂದಾ । ಶಿವ ಶಿವಾ ಈ ಶಿಶುವನೀಪರಿ ಅಸಮ ಬಲತಾನಿದ್ದು[2] ರಣದಲಿ ವ್ಯಸನ ಇಲ್ಲದೆ ಬಿಟ್ಟು ಬಂದಿಹ ವಿಷಮವೇನ್ನೈ ॥ ೨ ॥

### ಭಾಮಿನೀ

ತಂದೆ ನಿನ್ನಯ ದಯದಿ ಬಿಲದೊಳಗಿಂದ ಸುಖದೊಳು ಬಂದೆ ಕೇಳೈ ಮುಂದೆ ಬಾಗಿಲೊಳಿರ್ದ ಯದುಬಲ ಬಾಂಧವಾದಿಗಳು । ಒಂದೆರಡು ದಿನ ನೋಡಿ ಯದುಪುರಮಂದಿರಕೆ ನಡೆತಂದರೆನ್ನನು ನಿಂದಿಸುವರನು ವಾಗಿ ವನದೊಳು[3] ನೊಂದುಪೆಂದೆನುತಾ । ಕಂಡು ಶ್ರೀಪತಿಯ ಮುಖವ ಸಂಭ್ರಮಗೊಂಡು ಮಾತೆಯು ಮಗನ ಮುದ್ದಿಸಿ ಕಂಡೆ ವರ ಕಾಲ್ಕಟ್ಟಿ ನಾ ಬಸಗೊಂಡೆ ನಿನ್ನರವ । ಚಂಡಿಕಾಲಯದಲ್ಲಿ ನಿನ್ನ ಕಂಡ ದಿನ ರುಕ್ಮಿಣಿಯು ಶಿರದಲಿ ಗಂಡುದೀಪವ ಹೊತ್ತು ಕಷ್ಟವಕೊಂಡು ಪೋಗುವಳು ॥

### ನೀಲಾಂಬರಿರಾಗ-ಆಟತಾಳ

ಬಾರೋ ಬಾರೆನ್ನಯ ಮುದ್ದು ಕಂದಾಕಂದ । ತೋರಿಸಯ್ಯಾ ನಿನ್ನ ಮುಖವ ಕಂದಾ ಕಂದಾ ॥ ಘೋರಾರಣ್ಯದೊಳೋರ್ವನ ಕಂದಾ ಕಂದಾ । ಧೀರರೆಲ್ಲ ಬಿಟ್ಟು ಬಂದರೇನೂ ಕಂದಾ ಕಂದ ॥ ಹುಲಿಕರಡಿ ಬಿಲದೊಳಗೆ ಕಂದಾ ಕಂದ । ಬಲ ನಿನ್ನ ಕಳಿಸೀದನ್ಯಾಕೆಗೆ ಕಂದಾ ಕಂದ ॥ ದುಷ್ಟನೆಂದು ನಿನ್ನ ವನದಿ ಕಂದಾ ಕಂದ । ಬಿಟ್ಟು ಬಂದರೆಲ್ಲ ಪುರದಿ ಕಂದಾ ಕಂದ ॥ ಬಳಲಿದೆಯೋ ಸುಖವಿಲ್ಲದಲೆ ಕಂದಾ ಕಂದ । ಹಲುಬಿದ ಎನ್ನ ಅನ್ನವಿಲ್ಲದಕಟಾ ಕಂದಾ ಕಂದ ॥

---

೧. ಸುತ್ತಿ ಗಗನವ-ಪಾ. ೨. ಬಲತಾಗಿದ್ದ-ಪಾ. ೩. ಮನದೊಳು-ಪಾ.

### ಭಾಮಿನೀ

ಸಿಂಧುವಸೆನಾಧೀಶನೆ ಕೇಳರವಿಂದನಾಭನ ಬರುವ ನೋಡುತ
ಸುಂದರೀಯರೊಡಗೂಡಿ ರುಕ್ಮಿಣಿ ಬಂದು ನಮಿಸಿದಳು । ಮಂದ
ಹಾಸವ ಮಾಡಿ ಜಾಂಬವ ನಂದನೆಯ ಮುಖ ನೋಡಿ ನಗುತಲಿ
ಇಂದಿರೇಶನೊಳಂದಳೀಪರಿ ಕೇಳು ಭೂಪಾಲ ॥

### ಸಟಿಗಿ–ಆದಿತಾಳ

ವಂದಿಪೆ ಗೋವಿಂದ ಸುಂದರ ಚರಣಾರವಿಂದ ॥ ಪಲ್ಲವಿ ॥ ಬಂದಪ
ವಾದದ ಕುಂದನೆಣಿಸದಲಿ ಇಂದುವದನೆಯಳ ತಂದ ಗುಣಕೆ ಮೊದಲೊಂದಿಪೆ॥
ಮಣಿಯು ನೆವದಿ ವನಕೆ ಪೋದಿರಿ ವಿನಯಳ ತರುವುದಕೆ । ಮನ
ವ್ಯಸನವು ತಾಗಣಿಸದೆ ಯೌವನ ಘನವಾಗಿಹ ನಿಮ್ಮ ಗುಣಗಳಿಗಿದು
ಮೊದಲೊಂದಿಪೆ । ಫುಲ್ಲ ಲೋಚನ ವನದಿ ನೂತನ ವಲ್ಲಭೆಯಳ
ಸುಖದಿ ಎಲ್ಲಿ ದ್ವಾರಕೆ ಮತ್ತೆಲ್ಲಿ ಮಧುರೆ ನಿಜವಲ್ಲಭೆಯಳ ಸ್ಮೃತಿ
ಯಿಲ್ಲದ ಗುಣಗಳಿಗೆ ॥ ಬಿಲದೊಳಾಳಿದನೆನಿಸಿಯಾದವ ಬಲವನು
ಮುಂಗೊಳಿಸಿ । ಲಲನೆಯು ಸಂಗಡನಲಿದಾಡುತ ದಿನಗಳೆದ ನಮ್ಮನು
ಬಸವಳಿಸಿದ ಗುಣಗಳಿಗೊಂದಿಪೆ ॥

### ಭಾಮಿನೀ

ಇನಿತು ವನಿತೆಯು ಘನವಿನೋದವ ವನಜನಾಭನು ಕೇಳಿ ನಗುತಲಿ
ವಿನಯದಲಿ ಜಾಂಬವತನುಜೆಯನು ಕರೆಸಿದನು । ವನಚರನು ತಾ ಮಣಿ
ಯನೀಯದೆ ಸೆಣಸಿ ಕೊನೆಯೊಳು ತನ್ನ ಸುತೆಯನನುಕರಿಸಿ
ತಂದಿತ್ತ ಮಣಿಯನು ಕೇಳು ಕಾಮಿನಿಯೇ ॥ ಕೊಟ್ಟ ದಾನವ
ಸ್ವೀಕರಿಸದಲೆ ಪಿಂತಿಟ್ಟು ಬರುವುದು ಭೂಷಣವೆ ಕೇಳ್ ಪಟ್ಟದರಸಿಯೆ
ನಿನ್ನ ಮನದೊಳಗಿಟ್ಟು ನೋಡುವುದು । ಎಷ್ಟು ಪೇಳಿದರಾಕೆಯನು
ಸಮದೃಷ್ಟಿಯಲಿ ನೋಡುವೆನೆ ಎನುತಲಿ[೨] ನಿಷ್ಠುರಗಳ್ಯಾಕೆಂದ
ಮಾಧವ ಕೇಳು ಭೂಪಾಲ ॥

### ನವರೋಜ್[೧] ರಾಗ–ಆದಿತಾಳ

ಕಾಂತೆ ಸೈರಿಸು ಕೋಪ ಕೇಳು ಕಾಂತಾರದನುತಾಪ ॥ ಪಲ್ಲವಿ ॥
ಸಂತತ ನಿನ್ನಯ ಸಂತಾಪದಿ ಮಣಿಚಿಂತೆಯ ಮರೆತೆನು ಕಂತು
ವಿನಾಣೆ ॥ ೧ ॥ ಬಂದ ಮಾತಿಗೆ ಮನದಿ ಬಲುನೊಂದು ಪೋದೆನು
ವನದಿ । ಚಂದಿರಮುಖ ನಿನ್ನ ಒಂದರೆನಿಮಿಷವು ಮಂದಿರದೊಳು ಮರೆ

೧ ಸುರುಟಿ ರಾಗ-ಪಾ. ೨. ಎನ್ನಲಿ–ಪಾ.

ದೆಂದಿಗೆ ನಿಲ್ಲುವೆ ॥ ೨ ॥ ರಾಮ ರೂಪದೊಳಗೆ ಮುಂದೆ
ಜಾಮಾತಾ ನಿನಗೆ ನಾ ಮೊದಲ್ಹೇಳಿದ ನೇಮದ ಮಾತಿಗೆ ಕೋಮಲೆ
ಯಳ ತಂದೆ ಕಾಮಿನೀ ಮಣಿಯೇ ॥ ೩ ॥ ಸಿಟ್ಟು ಮಾಡದೆ
ನಿನ್ನ ಒಡಹುಟ್ಟಿದವಳಂತಿವಳನ್ನ । ಕಷ್ಟವಿಲ್ಲದೆ ಸಮದೃಷ್ಟಿಯಿಂದಲಿ
ಮನಮುಟ್ಟಿ ಪಾಲಿಸು ಎನ್ನ ಪಟ್ಟದರಸಿಯೇ ॥ ೪ ॥

### ಭಾಮಿನೀ

ಪೃಥ್ವೀಪತಿ ಕೇಳಿಂತು ಸತಿಯಳ ಚಿತ್ತವನು ಸಮನಿಸುತ್ತ ಯದುಕುಲ
ಸತ್ತಮನು ತಾ ನುಡಿಯೆ ಭೀಷ್ಮನ ಪುತ್ರಿ ಗರ್ವದಲಿ । ಮತ್ತೆ ಯಾಗಿ
ನಯ ತೋಷದಲಿ ಕರೆದಿತ್ತಳಾಜ್ಞೆಯ ನುಡಿದಳೀಪರಿ ನಿತ್ಯ ಎನ್ನಯ
ದೌತ್ಯಕರ್ಮವ ಮಾಡೆನೀಯೆಂದು ॥

### ಶಂಕರಾಭರಣರಾಗ–ಆದಿತಾಳ

ಪತಿಯು ವಚನ ಕೇಳಿ ಜಾಂಬವತಿಗೆ ನುಡಿದಳಿಂತು ಭೀಷ್ಮಜಾತೆಯು
ದೂತೆಯರೊಳಗೆ ನಡಿಯೆ ಸತಿಯೇ ರೋಹಿಣಿಯೇ । ಹಿರಿಯು
ತನವಿಟ್ಟು ಬರಿದೇ ಹರಿಯು ಹೇಳ್ದ ಪರಿಗೆ ನೀನು ಬರಿದೇ ಹಿಗ್ಗಬೇಡ
ಕೇಳು ಹರದಿ ರುಕ್ಮಿಣಿ । ಮೊದಲು ಲಗ್ನವಾದ ಪಟ್ಟಸುದತೆಯೆಂದು
ಎನಗೆ ನಿನ್ನ ಯದುರಾಜನಿತ್ತನು ಕೇಳೆ ಹರದಿ ರೋಹಿಣಿಯೇ ।
ತ್ರೇತೆಯೊಳು ಮೊದಲು ಮದುವೆ ಮಾತು ಕೊಟ್ಟ[1] ಕೃಷ್ಣ ಎನ್ನ
ನಾಥನಾದ ಎನಗೆ ನೀನೇ ದೂತೆ ರುಕ್ಮಿಣಿ । ಹುಟ್ಟು ಮೊದಲು
ವನದಿ ಸೇರಿ ದುಷ್ಟಪಿತನು ಮಣಿಯ ಕದ್ದು ಕೃಷ್ಣರಾಜಗೆ ದಂಡಕ್ಕೆ
ನಿನ್ನ ಕೊಟ್ಟ ರೋಹಿಣಿ । ದಾನ ಮಾರ್ಗದಲಿ ಬಹು ವಿಧಾನ
ಇರುವುದಲ್ಲಾ ಜಗದಿ ತಾನೇ ಓಡಿಬಹುದು ಮಾನವೇನೆ ರುಕ್ಮಿಣಿ ।
ಸೇರಿ ವನದಿ ತಿಂದಾ ಸೊಕ್ಕ ತೋರಿಸೋದು ಉಚಿತವಲ್ಲ ತೋರೀ
ಸೂವೆ ನಿನಗೆ ವನದಾ ದಾರಿ ರೋಹಿಣೀ । ಅಕ್ಕ ಕೇಳೆ ರಾಜಧಾನಿ
ರೊಕ್ಕದಿಂದ ಹಾಲುತುಪ್ಪ ಸಕ್ಕರೆ ತಿಂದು ಬೆಳೆದ[3] ಸೊಕ್ಕೇ ರುಕ್ಮಿಣಿ ।
ಕಾಡೂ ಮೃಗವಾ ತಂದು ಮನೆಗೆ ಕೂಡಿ ಋಷಿಗಳಾ ಬೀರಿದ ಕೃಷ್ಣಾ
ನೋಡಿದ ಕಣ್ಣಾರ್ಥಿಂದ[4] ಎನ್ನ ಮೂಢೆ ರೋಹಿಣೀ ॥

### ಭಾಮಿನೀ

ಪೊಡವಿ ಪಾಲಕ ಕೇಳು ಕೃಷ್ಣನ ಮಡದಿಯರು ಮೈಮರೆದು
ರೋಷದಿ ನುಡಿಯುತಿರಲಾಗ ನೋಡಿ ಮನದಲಿ ಮಿಡುಕಿದನು ಹರಿಯು ।

---

೧. ತಾ-?, ೨. ನಡೆದು-ಪಾ. ೩. ತಿಂದಾ-ಪಾ. ೪. ನೋಡಿದ ಕಣ್ಣಿಂದ.

ಖಡುಗವೆರಡರನೊಂದು[೧] ಒರೆಯೊಳಗಿಡಲು ಬಹುದೆ ಜಗದೊಳಗೆನ್ನುತ
ಸಡಗರದೊಳುಭಯರನು ಮುದ್ರಿಸಿ ನುಡಿವ ನೀಪರಿಯು ॥
ಪೃಥ್ವಿಪತಿ ಕೇಳಿಂತು ಸತಿಯರ ಚಿತ್ತವನು ಸಮನಿಸುತ ಯದುಕುಲ
ಸತ್ತಮನು ತಾರತಿಸದನದೊಳು ಮದಮತ್ತನಾಗಿಹನು । ಕತ್ತಲೆಯು
ನುಗಿದೇಳ್ವ ರವಿಕರ ಬಿತ್ತರವ ತಾಕಂಡು ಪೋಗುತ ನಿತ್ಯಕರ್ಮವ
ಮಾಡಿ ಸಭೆಗೈತಂದ ನಸುನಗುತ ॥

## ತ್ರಿಹುಡೆ

ಸುಖವೇಗದಾ ಕೃತವರ್ಮ ಸಾತ್ಯಕಿ ಮುಖರು ನೀವೆಲ್ಲವರು ಎನ್ನಯ
ಸುಖದಿ ಬೆಂಬಲವಾಗಿ ನಾ ಬಿಲಮುಖದಿ ಬಂದೆ ॥ ೧ ॥ ಕೇಳಿ ಸಾತ್ಯಕಿ
ನುಡಿದ್ದನರಿಯೊಳು ಬಹಳ ದಿನಗಳು ನೋಡಿ ಬಿಲದೊಳು ತಾಳದಲೆ
ಕ್ಷುಧೆಗಳನು ಬಂದೆವು ಪಾಲಿಸೆಂದಾ[೨] ॥ ೨ ॥ ಏಳು ಲೋಕದಿ ಬಲನ
ಭುಜಬಲ ಹೋಲುವರ ನಾ ಕಾಣೆನೆನುತಲಿ ಕಾಳಗದಲಿ ಪೋಗಿರಲು
ಬಿಟ್ಟೆರಿ ಪೋಲನವಗೆ । ಉದ್ಧವನು ಪೇಳದನು ಮುಂದಿನ ಬುದ್ಧಿ ತಿಳಿಯದೆ
ಬಂದೆನನುಚಿತ ಉದ್ಧರಿಸು ಮಾಧವನೆ ಎನ್ನುತ ಬಿದ್ದ ಪಾದಕ್ಕೆ[೩] ॥
ಅಣ್ಣ ಬಲರಾಮಾದ್ಯರಿದಿರೊಳು ಕನ್ಯಾಮಣಿಗಳ ತಂಡ ವಿಧಗಳು
ಬಣ್ಣಿಪನು ಮಾಧವನು ಬಹುವಿಧಾರಣ್ಯ ಕಥೆಯ ॥

## ಭಾಮಿನೀ

ಮೇದಿನೀಪತಿ ಕೇಳು ಮಾಧವನ್ಯಾದವರನ್ನಪ್ಪಂಗಿಸುತ ಬಿಲದೊಳಗಾದ
ವೃತ್ತಾಂತವನು ಪೇಳಿದ ಮೋದದಲಿ ಜನಕೆ । ಕಾದಿದೆನು ಸಮನಾಗಿ
ನಾ ಜಗದಾದಿ ಪುರುಷನು ಎಂದರೊಪ್ಪನು: ಆದಿ ಶ್ರೀ ರಘುರಾಮ
ರೂಪವ ಭೇದವಿಲ್ಲದಲೆ । ರಾಮರೂಪವ ನೋಡಿ ಜಾಂಬವ ನೇಮ
ದೊಳಗೆನ್ನಭಯ ಬೇಡಿದ ಸ್ವಾಮಿ ಎನ್ನಪರಾಧ ಮನ್ನಿಸು ಪ್ರೇಮ
ಗುಣದಿಂದ । ಕಾಮಿನಿಯು ಕರಪಿಡಿದು ಪೋಗೆಂದಾಮಹಾ ಜಾಂಬವನು
ಮಣಿಯನು ಪ್ರೇಮದಲಿ ತಂದಿತ್ತು ಬೇಡಿದ ಕಾಮಿತಾರ್ಥವನು ।
ಕೇಳಿ ದೇವಕಿ ದೇವಿಯಳು ಗೋಪಾಲ ನುಡಿದಾ ನುಡಿಗೆ ಹಿಗ್ಗುತ
ತಾಳಿ ಸಂತೋಷವನು ಬಾ ಯದುಮೌಳಿ ಎಂದೆನುತ । ತೋಳಿನಲಿ
ಬಿಗಿದಪ್ಪಿ ಮುದ್ದಿಸಿ ಖೂಳ[೪] ಸತ್ರಾಜಿತನ ನಾಲಿಗೆ ಸೀಳಿಸುವೆನೆಂದೆನುತ[೫]
ಸಭೆಯೊಳು ಪೇಳಿದಳು ಭರದಿ ॥

---

೧. ಖಡಗವೆರಡನು ಒಂದು ? ಖಡುಗಗಳೆರಡು ಒಂದು-ಪಾ. ೨. ಪಾಲಿಸೆಂದಾ-ಪಾ.
೩. ಪದಕೆ-ಪಾ. ೪. ಖಳ-ಪಾ. ೫. ಸೀಳಿಸುವೆನೆಂದು-ಪಾ.

### ಶಂಕರಾಭರಣರಾಗ–ಏಕತಾಳೆ

ಎಲ್ಲರು ನೋಡಿರೀಮಣಿಯ ಕಳ್ಳ ಕೃಷ್ಣಾನೆಂದೂ ರಾಯ ಸುಳ್ಳು ದೂರು ಮಾಡಿದ ಜಗವೆಲ್ಲ ಸುಮ್ಮನೆ ॥ ೧ ॥ ಹಿಂದೆ ಗೊಲ್ಲಾ ಬಾಲಕಿಯರು ತಂದ ಹಾಲು ಮೊಸರನ್ನೆಲ್ಲ ತಿಂದನೆಂತೆಂದೆಲ್ಲಾರೂ[೧] ಸುಳ್ಳೆ ನಿಂದಿಸಿದರು ॥ ೨ ॥ ರಾಧೆ ಚಂದ್ರಾವಳಿ ಮುಖ್ಯರು ಸೋದರಿಕೆ ಎಂದವರ ಮನೆಗೆ ಪೋದರವನೋಳಿವರೆಲ್ಲರೂ[೨] ಹಾದರ ವನ್ನು ॥ ೩ ॥ ಏನೂ ಮಾಡದಿರಲು ಹರಿಗೆ ತಾನೆಬರುವುದಪವಾದ ಗಳೂ ಹೀನ ಮಾತನಾಡಿ[೩] ಜನರು ಮಾನಗಳೆಯುವರು ॥ ೪ ॥

### ಭಾಮಿನೀ

ಆರಗೊಡವಿಗಳ್ಯಾಕೆ ನಮಗಿನ್ಯಾರ ಮನೆ ಮಾರುಗಳು ಬೇಕೆ ಸೇರ ದಿರುವರು ಮಥುರೆಯೊಳು ಜನ ಶೌರಿ ನಿನ್ನಿರವ । ತೋರಿಸೆಲ್ಲರ ಮುಂದೆ ರತ್ನವ ವೀರ ಸತ್ರಾಜಿತನ ನಾಲಿಗೆ ಸೀಳಿಕೊಡಿಸುವೆನೀ ಮಣಿಯ ಸುಮ್ಮನೆ ದೂರ ಬೇಡೆಂದೂ ॥

### ಭೈರವಿರಾಗ–ಏಕತಾಳೆ

ಮಾತೆ ನುಡಿಕೇಳಿದನು ಹರಿ ದೂತರ ಮುಖನೋಡಿದನು । ಆತುರ ದಲಿ ಕರಿರವನ ವಿಖ್ಯಾತಿ[೪] ಮಹಿಮ ಸತ್ರಾಜಿತನ । ತಡಮಾಡದೆ ನೀವೀಗ ಆ ಪೊಡವೀಪಾಲನ ಬೇಗ ಬಿಡದಿಲ್ಲಿಗೆ[೫] ಬರಮಾಡಿ ನೀವ್ ಬಡಮಾತಿಗೆ ಬಿಡಬ್ಯಾಡಿ । ಪಟ್ಟಣದೊಳಗೆಲ್ಲಿರಲೀ ಬೆನ್ನಟ್ಟಿ ಕರಿಯ ಬರದಿರಲಿ ರಟ್ಟೆಯ ಪಿಡಿರೆಂದವನ ಬೆನ್ನಟ್ಟಿದ[೬] ಹರಿದೂತರನ ॥

### ಭಾಮಿನೀ

ಧಾರುಣೀಪತಿ ಕೇಳು ಸಭೆಯೊಳು ಶೌರಿ ವಚನವ ಕೇಳುತಲೆ ಮಣಿ ಹಾರರೆಲ್ಲರು ಹರಿದು ನೋಡುವರಾಗ ದ್ವಾರಕಿಯ । ಕೇರಿಕೇರಿ ಗಳಲ್ಲಿ ನೋಡುತ ಭೂರಮಣನಾಲಯದ ಸಭೆ ಶೃಂಗಾರದಲಿ ಕುಳಿ ತಿರಲು ಕೃಷ್ಣನ ಚಾರರುಸಿರಿದರು ॥

### ಮುಖಾರಿರಾಗ

ಕೇಳು ಕೇಳಯ್ಯಾ ಸತ್ರಾಜಿತನೆ ಏಳಯ್ಯಾ ಥಟ್ಟನೆ । ಕೇಳು ಕೇಳಯ್ಯಾ ಸತ್ರಾಜಿತನೆ ॥ ಪಲ್ಲವಿ ॥ ಕಾಳಿಯ ಮರ್ದನ ಪೇಳಿದ ಸಭೆಯೊಳು ಕಾಲನ ಕ್ರೋಶವ[೭] ಮಾಡುತಲೆಮಗೆ ।

---

೧. ತಿಂದನೆಂದೆಲ್ಲಾರೂ-ಪಾ. ೨. ಪೋದರೆ ಮಾತವಳಿವರೆಲ್ಲರೂ-ಪಾ. ೩. ಮಾತಾಡಿ-ಪಾ. ೪. ಪ್ರಖ್ಯಾತ-ಪಾ. ೫. ಹಿಡಿದಿಲ್ಲಿಗೆ. ೬. ಎಂದಟ್ಟಿದ-ಪಾ. ೭. ಕೋಪವ-ಪಾ.

ರೂಢೀಶ ಕೇಳೋ ಕೃಷ್ಣಾನೆಂದೂ ಸಭೆಯೊಳು ಬಂದು ಆಡಿದ
ನಮಗೆ ದೊರೆಯಾರೆಂದು ಓಡಿಬರಲು೧ ತಡಮಾಡದೆ ನಿಮ್ಮನು
ಗಾಡನಿಲ್ಲಿಗೆ ಬರಮಾಡಿರೆಂದನು । ಮಂಡಲೇಶರನೆಲ್ಲಾ ಕರೆಸಿ ಸಭೆ
ಯೊಳು ಕುಳ್ಳಿರಿಸಿ ಪಂಡಿತಜನಕೆ ಪೀಠವ ಕೊಡಿಸಿ । ಪಾಂಡವ
ಯದುಕುಲ ಮಂಡಲದೊಳಗೆ ಖಂಡಲನೆಂದವ ಮಂಡಿಸಿರುವುದನು ।
ಕಾನನ ತಿರುಗಿತಾ ಕಲಿ ಜಾಂಬವನ ನೆಲಮನೆಯ ಪೊಕ್ಕು ದಾನವಾರಿಯು
ರಣದೊಳವನ ಕೊನೆಗಾಣಿಸಿ ರಘುಜನರೂಪವ ವಿಧಿತನಯಗೆ ತೋರಿಸಿ
ವಿನಯದಿ ತಂದ ವನಿತೆಯ ಮಣಿಯ ।

## ಭಾಮಿನೀ

ಇಳೆಯರಸನೆ ಕೇಳಿಂತು ದೂತರ ಲಲಿತ ವಚನವ ಕೇಳಿ ರಾಯನು
ನಳಿನಲೋಚನ ಯಾಕೆ ಕರೆಸಿದ ತಿಳಿಯದೆನಗೆಂದು । ಕಳವಳಿಸಿ
ತಾನೆಂದ ಮಾತಿಗೆ ಹಲವು ಜನರೇನೆಂದು೨ ಪೇಳ್ದರೊ ಕಲಹ ಬ್ಯಾಡೆ
ಮಗೆಂದು ದೇವನ ನಿಲಯ ಸಾರಿದನು ॥

## ಸೌರಾಷ್ಟ್ರರಾಗ-ತ್ರಿಹುಡೆತಾಳ

ಬರುವ ರಾಯನ ನೋಡಿ ಸಭೆಯೊಳಿರುವವರೆಲ್ಲರೂ ರಾಜಮಂದಿರ
ಧರೆಯೊಳ್ಕೈತಂದವರ ಕಂಡರು ವಿನಯದಿಂದ । ಸತ್ರಾಜಿತನೆತ್ತಿ ಕರ
ಗಳ ಸೋತ್ತಮರ ಸಂತೈಸಿ ಯದುಕುಲ ಸತ್ತಮನ ತಾಕಂಡು
ಮಣಿದನು ಪೃಥ್ವೀಪಾಲ । ಮುರಹರನೂ ತಾನೆರಗಿ ರಾಯನ ಕರವ
ಪಿಡಿದಾದರಿಸಿ ಪೀಠದೊಳಿರಿಸಿ ಮಾತನಾಡಿದನು ಸಭೆಯೊಳು ಕರುಣಾ
ದಿಂದಾ ।

## ಪಂತುವರಾಳಿ ರಾಗ

ಕೇಳಿರಿ ಸಭೆಯ ಸಂಪನ್ನರು ನ್ಯಾಯ ಪೇಳಿರಿ ತಿಳಿದಗ್ರಗಣ್ಯರು ಮೂಲ
ತಿಳಿಯದೆನಗೀ ರಾಯ ಮಣಿಕಳ್ಳಾತಾನೆಂದು ದೂರಿದರು ॥ ಚಿಂತೆ
ಯಿಂದೊಳಗೆಲ್ಲ ಸರಿ ಜನ ಕಾಂತರದಿ ಅಳಿಯಲು ರಾಯನು ಅಂತಕ
ಸಿಂಹನ ಕೊಂದಿರುವ ಜಾಂಬವಂತ ಬಿಲದಿ ಪೊಕ್ಕು ಮಲಗಿರುವ ।
ಬಿಲವಪೊಕ್ಕವನೊಳು ಸೆಣಸಿದೆ ಮನ ಒಲಿದು ರಾಮನ ರೂಪಧರಿಸಿದೆ
ಅಳವಿಯನಳಿದು ಜಾಂಬವ ಎನ್ನ ಪಾದ ಜಲಜವ ಬೀಳ್ದನು೩ ಸಂಪನ್ನ ।

---

೧. ಓಡಿ ಬರಲು-ಪಾ. ೨. ಜನರಿಂದೇನು-ಪಾ. ೩. ಬೀಳುತ-ಪಾ.

ಸ್ತುತಿಸಿ ಎನ್ನನು ವೇದವಚನದಿ ತನ್ನ ಸುತೆಯಳ ಕರೆತಂದ ಪ್ರೇಮದಿ।
ಹಿತದಿ ಧಾರೆಯನೆರೆದಿತ್ತಿಹನು ನಿನ್ನ ರತುನವ ಕೊಟ್ಟು ನುತಿಸಿದನು।
ಸಾಕ್ಷಿಯಾಗಿಹಳೆನ್ನ ಮಾತಿಗೆ ಅಂಬುಜಾಕ್ಷಿಯು ಕರೆತಂದೆನಿಲ್ಲಿಗೆ।
ಪಕ್ಷಪಾತಗಳಿಲ್ಲದೆಲ್ಲವರು ದೋಷ ಶಿಕ್ಷಾರಕ್ಷಣೆ ಪೇಳಿ ಬಲ್ಲವರು॥

### ಕಾಂಬೋದಿರಾಗ-ಝಂಪೆತಾಳ

ಮಾಧವನ ನುಡಿಯನಾಲೈಸಿ ಪೇಳಿದನು ಮೇದಿನೀಪತಿಯೆ ನಾ ದೋಷಿ। ವೇದಗೋಚರ ನಿನ್ನ ಬರಿದೆ ದೂರಿದೆನೊ ಆದರೇನೆಂದು ಮುಂದರಿದೆ। ಸೋದರಗೆ ಬಂದ ಕಾಲಗತಿಯು ಕರೆದೊಯ್ದು ಆದಿತ್ಯ ಮೃಗದಿಂದ ಮೃತಿಯು। ಪೋದ ಮಾತುಗಳಿಂದಲೇನು ಎನ್ನ ಪರಿವೇದಿನೆಯ ಲಾಲಿಸೈ ನೀನು। ಆ ಮಹಾಜಾಂಬವನ ಬಿಲದಿ ಹೊಯ್ದಾಡಿ ಕಾಮಿನಿಯು ಕಂಡ್ಯೊ ನೀ ಶ್ರಮದಿ। ಪ್ರೇಮದೊಳಗೀಗೆನ್ನ ಸುತೆಯು ವರಸತ್ಯಭಾಮೆಯನು ಸ್ವೀಕರಿಸು ಸತಿಯಾ। ಪಾರಿತೋಷಕವಾಗಿ ಮಣಿಯು ಕೊಡುವೆ ನಾ ಶೌರಿ ತೋಷಕನಾಗು ಸುತೆಯು। ಪೂರೈಸು ಎನ್ನ ಮನತೃಷೆಯು ನೀನೊಲಿದಪಾರ ಪಾತಕಿಗೆ ಸದ್ಗತಿಯು। ಇನಿತು ಪೇಳುತ ಸತ್ರಾಜಿತನು ನಮಿಸಿದವನು ವಿನಯದಿ ನಾರದಾದ್ಯರನು। ಘನತರೋತ್ಸವದಿಂದ[೧]ಲವನು ವರದಾನ ಪ್ರಣತಿಗಳ ಮಾಡಿಸಿದನು[೨]।

### ಕೇತಾರಗೌಳರಾಗ-ಅಷ್ಟತಾಳ

ನಾರದನೆಂದನು ಶೌರಿ ಬಲೆಯಿಂದ ಜಾರಿದೆ ವಿನಯದಿಂದ। ಧಾರೆ ಎರೆದು ಮೊದಲಾರತಿ ಮಾಡಿಸುನಾರಿಯರ ಕರೆಸೆಂದನು॥ ಸಾಂದೀಪನಾಚಾರ್ಯನೆಂದನು ರಾಯನೊಳಿಂದಿನ ಶುಭದಿನವು। ಬಂದಿದೆ ಮಾಡು ನೀ ನಂದನೆಯಳ ಗೋವಿಂದಗೆ ಪರಿಣಯವು॥ ಜಾಬಾಲಿ ಕೌಶಿಕ ವಾಜಪೇಯರು ಬಂದು ರಾಜನೊಳಿಂತೆಂದರು। ಪೂಜಿಸಿ ಯಾದವರಾಯನ ಇದಿರುಗೊಂಡ ಭೋಜನರಚಿಸೆಂದರು॥

### ಭಾಮಿನೀ

ಮೇದಿನೀಪತಿ ಕೇಳು ಯದುಪುರದ್ವಾದಿಬೀದಿಗಳಲ್ಲಿ ದ್ವಿಜವರ ವೇದಘೋಷಗಳಿಂದ ಪೂರಿತವಾದುದೇನೆಂಬೆ। ಮಾಧವನ ಕರೆದೊಯ್ದು

---

೧. ಘನತೆ ತೋರ್ಪುದರಿಂದಲವನು-ಪಾ. ೨. ಮಾಡಿ ಕೇಳಿಸಿದನು-ಪಾ.

ಪರಿಣಯ ವೇದಿಕೆಯನೇರಿಸುತ ಸುತೆಯಳ ಸಾದರದಿ೧ ಕರೆತಂದು ನುಡಿದನು ಬಾದರಾಯಣಗೆ ॥

## ಸೌರಾಷ್ಟ್ರರಾಗ

ವಾಸವೀಸುತ ಕೇಳು ಶ್ರೀ ಜಗದೀಶನೆಂದರಿಯದಲೆ ಹರಿಯನು ಈ ಸ್ಯಮಂತಕ ನೆವದಿ ದೂರಿದೆ ದೋಷಿಯೆಂದು । ಅಂಬುಜಾಸನತನುಜ೨ನಾಗಿಹ ಜಾಂಬನು ಮುಂದರಿದು ಕಾದಿದ ಅಂಬುಜಾಕ್ಷನ ತಿಳಿದು ಕೊಟ್ಟನು ಜಾಂಬವತಿಯ ॥ ಜ್ಞಾನವಿಲ್ಲದೆ ನುಡಿದ ಮಣಿನವ ದಾನ ವಾಂತಕನೆಣಸದಲೆ ಎನ್ನ ಮಾನದಲೆ ತಂದಿರುವನೆಂದನು ಮಾನವೇಂದ್ರ । ಈ ಸ್ಯಮಂತಕ ಸಹಿತ ಸುತೆಯಳ ವಾಸುದೇವಗೆ ಒಲಿದು ಕೊಡುವೆನು ಭೂಸುರೋತ್ತಮರೆಲ್ಲ ಕೇಳಿರಿ ಭಾಷಣಗಳನು । ಮುರಹರಾರ್ಪಣ ವೆನುತ ಶ್ರೀಹರಿ ಕರದಿ ತುಳಸಿಯನಿತ್ತು ಧಾರೆಯನೆರೆದ ಕುವರಿಯ ರತುನಸಹಿತಲೆ ಧರಣೀಪಾಲ ॥

## ವಾರ್ಧಿಕ್ಯ

ಜಯ ಜಯಾ ದೀನಾಧ್ಯಕ್ಷಕುಲರಾಜ ಹರಿಯಕ್ಷ
ಜಯ ಜಯಾ ಮತೋದ್ಧಾರಕಲಿತಾಟಕಾಮಾರಾ
ಜಯ ಜಯಾ ತುಳಾಭಂಜನಾ

ಜಯ ಜಯತು ಗೋಪಾಲ ಜಯದೇವಕೀ ಬಾಲ
ಜಯ ಜಯತು ಗುಣಪ್ರೋತ ಜಯ ಪೂತನಾಮಾರ
ಜಯ ಜಯತು ಸರ್ವೇಶ ಜಯಧೇನುಕಾನಾಶ
ಜಯ ಜಯತು ಗೋವರ್ಧನಾ ಜಯ ಜಯತು ಕಂಸಾಂತಕಾ
ಜಯ ಜಯತು ರುಕ್ಮಿಣೀಕಾಂತ ಜಯ ಜಯತು ನರಸೂತ
ಜಯ ಜಾಂಬವತೀ ಪ್ರೀತ ಜಯ ಜಯತು ಗೋವಿಂದ
ಜಯ ಸಚ್ಚಿದಾನಂದ ಜಯತೆಂದರು ದಿವಿಜರು

ಶ್ರೀ ಜಾಂಬವತೀ ಕಲ್ಯಾಣ ಸಂಪೂರ್ಣಂ

---

೧. ನಾದರದಿ-ಪಾ. ೨. ಅಂಬುಜಾಸನನನುಜ-ಪಾ.

# ಕಠಿಣ ಪದಗಳ ಅರ್ಥ

| ಪುಟ | ಪದ | ಅರ್ಥ |
|---|---|---|
| ೧ | ವಿನುತಂ | ಸ್ತುತಿಸಲ್ಪಟ್ಟ |
| ೧ | ಸುವಸನಂ | ಒಳ್ಳೆ ವಸ್ತ್ರ ಉಟ್ಟಿರುವ |
| ೧ | ಭರಿತಂ | ಶೋಭಿತ, ಕೂಡಿದ |
| ೧ | ಆರಾಜಿತಂ | ಸಿಂಗರಿಸಲ್ಪಟ್ಟ |
| ೧ | ನಿಭವದನ | ಹೋಲುವ ಮುಖವುಳ್ಳ |
| ೧ | ಪರಿಧಾಮ | ಮನೆಯಾದ |
| ೧ | ರಜನಿಚರ | ರಾತ್ರಿ ಸುತ್ತುವವ, ಚಂದ್ರ |
| ೧ | ತೋಷದಲಿ | ಆನಂದದಲ್ಲಿ |
| ೧ | ನೀರಜ | ಕಮಲ |
| ೧ | ಬಿಸುಜ | ಕಮಲ |
| ೧ | ಬುಧರು | ವಿದ್ವಾಂಸರು |
| ೨ | ಇಂದಿರೇಶ | ಲಕ್ಷ್ಮಿಯ ಗಂಡ, ವಿಷ್ಣು (ಕೃಷ್ಣ) |
| ೨ | ಜಲಜನಾಭ | ಪದ್ಮನಾಭ (ಕೃಷ್ಣ) |
| ೩ | ಸುರಭೀಶರಿಗೆ | ಕಾಮಧೇನುವಿನ ಒಡೆಯರು, ದೇವತೆಗಳು |
| ೩ | ವಸುಧೀಶ | ಭೂಮಿಗೊಡೆಯ |
| ೩ | ವಿನುತಸುತರಥಗೆ | ಗರುಡವಾಹನನಿಗೆ (ಕೃಷ್ಣಗೆ) |
| ೪ | ಗೊರಳಿಗಡವಡಿಸಿ | ಕೊರಳಿಗೆ ಹಾಕಿ |
| ೪ | ಬಾಹ್ಯ | ಹೊರವಲಯ |
| ೪ | ಅಗ್ರಭವ | ಅಣ್ಣ |
| ೪ | ಪಾಂಚಾನನ | ಸಿಂಹ |
| ೫ | ಬಳ್ಳು | ನರಿ |
| ೫ | ನಖದಲಿ | ಉಗುರಿನಲ್ಲಿ, ಪಂಜದಿಂದ |
| ೫ | ಸದನ | ಮನೆ |
| ೫ | ದೃಢತರ | ಕ್ರೂರವಾದ |
| ೫ | ಮಾನುಷ ಭಾವವ ನೀಗಿ | ಎಚ್ಚರತಪ್ಪಿ |
| ೫ | ಅಂತಕ | ಯಮ |
| ೬ | ವಿಧಿಸುತ | ನಾರದ |
| ೬ | ಭಾವಜ ಪಿತ | ಮನ್ಮಥನ ಅಪ್ಪ (ಕೃಷ್ಣ) |
| ೬ | ಕಾಂತಾರ | ಕಾಡು |

| ಪುಟ | ಪದ | ಅರ್ಥ |
|---|---|---|
| ೭ | ತೃಣ | ಹುಲ್ಲು |
| ೭ | ಹಲಧರ | ಬಲರಾಮ |
| ೭ | ವ್ರಜಮಂದಿರ | ಗೋಕುಲ |
| ೭ | ಜಾರ | ಹಾದರಿಗ |
| ೮ | ವರಸಿರಾಪಾಣಿ | ಬಲರಾಮ ? |
| ೮ | ತೋಷವ ಮಾಡಿ | ನಗುತ್ತ |
| ೮ | ಆನನ | ಮುಖ |
| ೮ | ವಿಹಗ | ಪಕ್ಷಿ |
| ೮ | ಹರಿ | ಸಿಂಹ |
| ೯ | ಗಹ್ವರಿ | ಗವಿ, ಬಿಲ |
| ೯ | ನಾಗರಿ | ಕೃತ್ರಿಮ |
| ೯ | ಭೋಜಾರಿ | ಕೃಷ್ಣ ? |
| ೯ | ಮಲ್ಲವೈರಿ | ಕೃಷ್ಣ |
| ೯ | ಕೃಪಾಣ | ಖಡ್ಗ |
| ೯ | ಸಿಂಧುರಾಮ | ರಾಜ |
| ೯ | ಭಲ್ಲೂಕ | ಕರಡಿ |
| ೯ | ಅತಿ ಜವದಿ | ಬೇಗನೆ |
| ೧೦ | ಅದ್ರಿ | ಪರ್ವತ |
| ೧೦ | ಕುಹರ | ಗವಿ |
| ೧೦ | ತೃಣ ಗುಲ್ಮಾದಿ | ಹುಲ್ಲುಪೊದರು |
| ೧೦ | ಫಣೆಲಿಖಿತ | ಹಣೆಬರಹ |
| ೧೦ | ಮೋಹರ | ಯುದ್ಧ |
| ೧೦ | ಕೋಪವಡದ | ಸಿಟ್ಟಿಗೆದ್ದ |
| ೧೦ | ಶಾರ್ಙಧರ | ಕೃಷ್ಣ |
| ೧೧ | ಜಲಜ | ಕಮಲ |
| ೧೧ | ಸಂಗರ | ಸಂಗ್ರಾಮ |
| ೧೧ | ಕಾಕು | ನೀಚ |
| ೧೧ | ದಾನವಿ | ರಾಕ್ಷಸಿ |
| ೧೧ | ನಗ | ಬೆಟ್ಟ |
| ೧೧ | ವಿಘಟ | ಅದ್ಭುತ |
| ೧೨ | ಫಣಿ | ಹಾವು |
| ೧೨ | ಫಾಳಿರೂಪದಿ | ಗಾಳಿಯಾಗಿ ಬಂದ |
| ೧೨ | ನೊಸಲು | ಹಣೆ |
| ೧೨ | ಮುಸಲ | ಗದೆ |

| ಪುಟ | ಪದ | ಅರ್ಥ |
|---|---|---|
| ೧೩ | ಮಹಿ | ಭೂಮಿ |
| ೧೩ | ಹೇಮಗರ್ಭ | ಹಿರಣ್ಯಗರ್ಭ, ಬ್ರಹ್ಮ |
| ೧೩ | ದನುಜರ | ರಾಕ್ಷಸರನ್ನು |
| ೧೩ | ಚಾಪವ | ಬಿಲ್ಲನ್ನು |
| ೧೪ | ಕಾಟಕಾಮಾರ | ಕಾಟಕಿಯನ್ನು ಕೊಂದ ರಾಮ |
| ೧೪ | ತುಳಾಭಂಜನ | ರಾಮ ? |
| ೧೫ | ಧಾತಾಸಂಭವ | ಬ್ರಹ್ಮನ ಮಗ, ಜಾಂಬವಂತ |
| ೧೫ | ಸಾಕೇತಪತಿ | ಅಯೋಧ್ಯಾಪತಿ, ರಾಮ |
| ೧೫ | ಪಾಲವಾರಿಧಿ | ಹಾಲಕಡಲು |
| ೧೫ | ತೋಯಜಾಕ್ಷ | ಕಮಲಾಕ್ಷ, ಕೃಷ್ಣ |
| ೧೫ | ಶ್ರೀನಿಕೇತನ, ಶ್ರೀಶ | ಕೃಷ್ಣ |
| ೧೫ | ಆಯತಾಕ್ಷ | ಅಗಲ ಕಣ್ಣಿನವ |
| ೧೫ | ಜರತ್ಕಾಯ | ಮುದಿ ದೇಹ |
| ೧೫ | ನುರೆ | ನುರಿದು |
| ೧೫ | ಸೇವ್ಯಸೇವಕ | ಸೇವಿಸುವವರ ಸೇವಕ |
| ೧೫ | ಕುಂಭಿನೀಪತಿ | ರಾಜ |
| ೧೬ | ಅಷ್ಟವಿಂಶಾಹ | ಇಪ್ಪತ್ತೆಂಟು (ದಿನ ? ಗಂಟೆ ?) |
| ೧೬ | ಗದ | ಒಬ್ಬ ಯಾದವ |
| ೧೬ | ಉದ್ಧವ | ಇನ್ನೊಬ್ಬ ಯಾದವ |
| ೧೭ | ಮಾನೀತ | ಘನವಂತ |
| ೧೮ | ನಗಧರ | ಗಿರಿಧರ, ಕೃಷ್ಣ |
| ೧೮ | ಇಳೆ | ಭೂಮಿ |
| ೧೮ | ಶ್ರೀಪತಿ | ಕೃಷ್ಣ |
| ೧೮ | ಭಾವಜಪಿತ | ಮನ್ಮಥನ ಅಪ್ಪ, ಕೃಷ್ಣ |
| ೧೯ | ಪೊಡವೀಶ | ರಾಜ |
| ೧೯ | ಆಲ್ಪರಿದು | ಹಲುಬಿ, ಹಾಡಿ |
| ೧೯ | ವಿಧಿಸುತ | ನಾರದ |
| ೧೯ | ವನಜ ಪೀಠಜ | ನಾರದ |
| ೧೯ | ಗಳಶೋಷ | ಕಂಠ ಶೋಷಣೆ, ಅಳುವುದು |
| ೨೦ | ಮೋದಿಸುವೆ | ಸಂತೋಷಿಸುವೆ |
| ೨೦ | ಸಾದುತ | ಹೋಗಿ |
| ೨೦ | ಭೂತೇಶನರಸಿ | ಅಂಬಿಕೆ, ಪಾರ್ವತಿ |
| ೨೦ | ಸಾಪಾಟಿಯವರು | ಸವತಿಯರು |
| ೨೦ | ಪಿನಾಕಿನಿ ರಾಣಿ | ಪಾರ್ವತಿ |

| ಪುಟ | ಪದ | ಅರ್ಥ |
|---|---|---|
| ೨೦ | ಗಂಡುದೀಪವ ಹೊರುವೆ | ಗರತಿಯ ಹರಕೆ (ಜಾನಪದ ಆಚರಣೆ |
| ೨೦ | ಶೌರಿಸತಿ | ರುಕ್ಮಿಣಿ |
| ೨೦ | ಶರ್ವಾಣಿ | ಪಾರ್ವತಿ, ದುರ್ಗೆ |
| ೨೧ | ಯಾದವೇಶ | ಕೃಷ್ಣ |
| ೨೧ | ಕ್ಷೋಣಿಪತಿ | ಭೂಮಿ ಪತಿ, ಅರಸ |
| ೨೧ | ಬಲಗೊಂಡು | ಪ್ರದಕ್ಷಿಣೆ ಹಾಕಿ |
| ೨೧ | ಸಂಸ್ತುತಿಗೈದು | ಸ್ಮರಿಸಿಕೊಂಡು |
| ೨೧ | ಉತ್ತರಾಸುತ | ಪರೀಕ್ಷಿತ |
| ೨೧ | ಚಿತ್ರಜಾತನ ಪಿತ | ಮನ್ಮಥನ ಅಪ್ಪ, ಕೃಷ್ಣ |
| ೨೧ | ಸತ್ವರದಿ | ತ್ವರೆಯಿಂದ, ಬೇಗ |
| ೨೧ | ಖಗಕುಲಸತ್ತಮ | ಗರುಡ |
| ೨೨ | ಮುರಹರ | ಕೃಷ್ಣ |
| ೨೨ | ಪಲ್ಗಳ | ಹಲ್ಲುಗಳ |
| ೨೨ | ಕಪ್ಪವಕೊಂಡು | ಕಂಕಣಬದ್ಧಳಾಗಿ ಕಾಣಿಕೆಹೊತ್ತು |
| ೨೩ | ಅರವಿಂದ ನಾಭ | ಕೃಷ್ಣ |
| ೨೩ | ಕುಂದನು | ಅಪವಾದವನ್ನು |
| ೨೩ | ವಿನಯಳ | ಇಚ್ಛೆಯನರಿವ ಸತಿಯ |
| ೨೩ | ಫುಲ್ಲಲೋಚನ | ಕಮಲಾಕ್ಷ, ಕೃಷ್ಣ |
| ೨೩ | ಪಿಂತಿಟ್ಟು | ಹಿಂದೆಕೊಟ್ಟು, ತಿರಸ್ಕರಿಸಿ |
| ೨೩ | ಕಂತುವಿನಾಣೆ | ಮಗನಾದ ಮನ್ಮಥನಾಣೆ |
| ೨೪ | ಜಾಮಾತಾ | ಮಾವ |
| ೨೪ | ದೌತ್ಯಕರ್ಮ | ದೂತೆಯ ಕೆಲಸ |
| ೨೪ | ಪಟ್ಟಸುದತೆ | ಪಟ್ಟದ ರಾಣಿ |
| ೨೫ | ಬಹುವಿಧಾರಣ್ಯ ಕಥೆಯ | ಕಾಡಿನ ಪಡಿಪಾಟಲನ್ನು |
| ೨೫ | ಕಾಮಿತಾರ್ಥ | ಇಷ್ಟಾರ್ಥ, ಬಯಸಿದ್ದು |
| ೨೫ | ಯದುಮೌಳಿ | ಕೃಷ್ಣ |
| ೨೫ | ಖೂಳ | ಕೆಟ್ಟವ |
| ೨೬ | ಪೊಡವಿಪಾಲ, ಧಾರುಣೀಪತಿ | ಅರಸ |
| ೨೬ | ಮಣಿಹಾರರು | ಮೋಲ್ಪಿಚಾರಕರು |
| ೨೬ | ಕ್ರೋಶವ ಮಾಡುತ | ಕೂಗುಹಾಕುತ್ತ |
| ೨೭ | ಖಂಡಲ | ಮುಖಂಡ ? |
| ೨೭ | ರಘುಜ | ರಾಮ, ರಘುವಂಶಿ |
| ೨೭ | ಆಳವಿಯನಳಿದು | ಯುದ್ಧಬಿಟ್ಟು |
| ೨೮ | ನಮಿಸಿದನು | ನಮಸ್ಕರಿಸಿದ |

| ಪುಟ | ಪದ | ಅರ್ಥ |
|---|---|---|
| ೨೮ | ಅಂಬುಜಾಕ್ಷಿ | ಜಾಂಬವತಿ |
| ೨೮ | ಪರಿವೇದನೆ | ನಿವೇದನೆ, ಬೇಡಿಕೆ |
| ೨೮ | ನಂದನೆ | ಮಗಳು |
| ೨೯ | ಬಾದರಾಯಣ, ವಾಸವೀಸುತ | ಕೃಷ್ಣ |
| ೨೯ | ದೋಷಿ | ಆರೋಪಿ, ಅಪರಾಧಿ |
| ೨೯ | ದಾನವಾಂತಕ | ಕೃಷ್ಣ |
| ೨೯ | ದೀನಾಧ್ಯಕ್ಷ | ದೀನಬಂಧು |
| ೨೯ | ಧೇನುಕಾನಾಶ | ಧೇನುಕಾಸುರನನ್ನು ಕೊಂದ ಕೃಷ್ಣ |
| ೨೯ | ನರಸೂತ | ಅರ್ಜುನನ ಸಾರಥಿ |

'ಹೇಳು-ಕೇಳು' ಪರಂಪರೆಯ ಜತನದಿಂದ ದಕ್ಕಿರುವ ನಮ್ಮ ಜನಪದ ಕಾವ್ಯಗಳು ಓದುಗರಲ್ಲಿ ಸಾಂಸ್ಕೃತಿಕ ಅರಿವನ್ನು, ಸಾಮಾಜಿಕ ಸಭ್ಯತೆಯನ್ನು ಬಿತ್ತಬಲ್ಲವು. ಅಲ್ಲದೆ ನಮ್ಮ ರಾಜಕೀಯ ವಿವೇಕ ಸಾಯದಂತೆ ನೋಡಿಕೊಳ್ಳಬಲ್ಲವು. 'ನೋಡಿ ಕಲಿ, ಕೇಳಿ ಕಲಿ' ಎನ್ನಬೇಕಾದ ದೃಶ್ಯ ಶ್ರವ್ಯ ಮಾಧ್ಯಮಗಳು ಬರಬರುತ್ತ 'ಕೇಳು-ಕೆಡು' 'ನೋಡು-ಕೆಡು' ಎಂಬ ಭಂಡತನಕ್ಕೆ, ಅವನತಿಗೆ, ಅರಾಜಕತೆಗೆ ಸಾಗುತ್ತಿರುವುದು ಅತ್ಯಂತ ವಿಷಾದಕರ ಸಂಗತಿ. ಇಂತಾ ಹೊತ್ತಿನಲ್ಲಿ ಹಳೆ ಯಕ್ಷಗಾನ, ಬಯಲಾಟ, ನಾಟಕ, ಹಾಡುಗಳು, ಕುಣಿತದ ಪದ, ತತ್ವಪದಗಳೆಡೆಗೆ ಮರುನೋಟ ಬೀರಿ, ಅವುಗಳಲ್ಲಿ ಅಡಗಿರುವ ಮಾನವೀಯ ಮೂಲಸತ್ವವನ್ನು ಹೀರಿ, ನಮ್ಮ ಬದುಕಿಗೆ ಹೊಸದಾಗಿ ಕಸಿ ಕಟ್ಟಬೇಕಾಗಿದೆ. ಹೀಗೆ ಮಾಡಿದಾಗ ಮಾತ್ರ ಜನಪದ ಸಾಹಿತ್ಯ ಉಳಿದು ಬಂದದ್ದು ಸಾರ್ಥಕವಾಗುತ್ತದೆ ಮತ್ತು ಆಧುನಿಕ ಬದುಕಿಗೆ ಹೊಸ ಹದ ಬರುತ್ತದೆ.

ಇಪ್ಪತ್ತನೆ ಶತಮಾನದ ಆದಿಭಾಗದಲ್ಲಿ ಆಯನೂರು ಹೊನ್ನಾಳಿ ಸೀಮೆಗಳಲ್ಲಿ ರಂಗಸ್ಥಳದಲ್ಲಿ ಬೆಳಗಿದ 'ಜಾಂಬವತಿ ಕಲ್ಯಾಣ' ಕ್ರಮೇಣ ಬರಿ ಕಂಠಸ್ಥವಾದ ಸಂಪತ್ತಾಗಿ ನಮ್ಮ ಅಮ್ಮ ದೊಡ್ಡಮ್ಮರ ಕೊರಳುಗಳಲ್ಲಿ ಹುದುಗಿತ್ತು. ಇಲ್ಲಿನ ರಾಗದ ಮಟ್ಟುಗಳು, ಕಾವ್ಯಶಕ್ತಿ, ಸಂವಾದ ಸತ್ವ ಯಾರನ್ನೂ ಆಕರ್ಷಿಸಬಲ್ಲವು. ಶಿಷ್ಟ ಸಂಸ್ಕೃತಿಗಳನ್ನು ಸಮೀಕರಿಸುವ ಮೂಲಕ ಸಮತೆಯನ್ನು ಎತ್ತಿ ಹಿಡಿಯುವುದು ಹಾಗು ಪ್ರಾಕೃತಿಕ ಪರಿಸರ ಮತ್ತು ನಾಗರಿಕ ಪರಿಸರಗಳ ಸಾಮರಸ್ಯದ ಅವಶ್ಯಕತೆಯನ್ನು ಒತ್ತಿಹೇಳುವುದು ಇಲ್ಲಿನ ಮುಖ್ಯ ಆಶಯಗಳಾಗಿವೆ.